# ಅಧ್ಯಾಯ–III

## ವಿದ್ಯುತ್ ವಲಯಕ್ಕೆ ಸಂಬಂಧಿತ ಸಾವಉಗಳಲ್ಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

# ಅಧ್ಯಾಯ – III

## 3. ವಿದ್ಯುತ್ ವಲಯದ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ (ಸಾವಉಗಳು) ಪೂರ್ವಭಾವಿ ಯೋಜನೆ, ಹೂಡಿಕೆ ಮತ್ತು ನಿರ್ವಹಣಾ ಕಾರ್ಯಚಟುವಟಿಕೆಗಳಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುವ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಪ್ರಮುಖ ಅಂಶಗಳನ್ನು ಈ ಅಧ್ಯಾಯದಲ್ಲಿ ಸೇರಿಸಲಾಗಿದೆ. ಇವು ಯೋಜನೆಯಲ್ಲಿ ಗುರಿಯಾಗಿಸಿಕೊಳ್ಳಲಾಗಿದ್ದ ಉದ್ದೇಶಗಳು ಈಡೇರದಿರುವಂಥ ಪ್ರಕರಣಗಳ ಮೇಲೆ ಲೆಕ್ಕಪರಿಶೋಧನೆಯು ಗಮನಿಸಿದ ಅಂಶಗಳನ್ನು ಒಳಗೊಂಡಿರುತ್ತದೆ.

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ.**

### 3.1. *ಆರ್‌ಎಪಿಡಿಆರ್‌ಪಿ–ಯೇತರ/ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಂದ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳಿಗೆ (ಡಿಟಿಸಿಗಳಿಗೆ) ಮೀಟರ್‌ಗಳ ಅಳವಡಿಕೆ*

**ಪೀಠಿಕೆ**

**3.1.1.** ವಿದ್ಯುಚ್ಛಕ್ತಿ ವಿತರಣಾ ವ್ಯವಸ್ಥೆಯಲ್ಲಿ ಅಂತಿಮ ಪರಿವರ್ತನೆಯನ್ನು ಒದಗಿಸುವ ಒಂದು ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರವು (ಡಿಟಿಸಿ) ಮೂಲತಃ ವಿದ್ಯುತ್ತಿನ ಅಧಿಕ ಓಲ್ಟೇಜಿನಿಂದ ಕಡಿಮೆ ಓಲ್ಟೇಜಿಗೆ ತಗ್ಗಿಸುವಿಕೆ ಟ್ರಾನ್ಸ್‌ಫಾರ್ಮರ್ ಆಗಿರುತ್ತದೆ. ವಿದ್ಯುತ್ ಪ್ರಸರಣಾ ಮಾರ್ಗದಿಂದ ಅಧಿಕ ಪ್ರಮಾಣದ (400/220/110/66 ಕೆವಿ) ಓಲ್ಟೇಜನ್ನು ಪ್ರಾಥಮಿಕ ವಿತರಣಾ ಓಲ್ಟೇಜ್ ಮಟ್ಟಕ್ಕೆ (11 ಕೆವಿ) ತಗ್ಗಿಸುವ ಟ್ರಾನ್ಸ್‌ಫಾರ್ಮರ್‌ನಿಂದ ತಗ್ಗಿಸಲಾಗುವುದು. ಮುಂದುವರೆದು, ಈ ಓಲ್ಟೇಜನ್ನು ಅಂತಿಮ ಮಟ್ಟದ ಬಳಕೆದಾರರುಗಳು ಬಳಸುವ ಸಲುವಾಗಿ ಡಿಟಿಸಿ ಮೂಲಕ 400/220 ಓಲ್ಟುಗಳಿಗೆ ತಗ್ಗಿಸಲಾಗುವುದು. ಒಂದು ಡಿಟಿಸಿಯಿಂದ ವಿದ್ಯುತ್ ಹೊರಹರಿವನ್ನು ಅಂತಿಮ ಮಟ್ಟದ ಬಳಕೆದಾರರುಗಳಿಗೆ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ ಒಂದು ವಿತರಣಾ ಕಂಡಕ್ಟರ್‌ನಿಂದ ಅತೀ ಸಮೀಪದ ವಿದ್ಯುತ್ ಕಂಬದಲ್ಲಿ ಒಂದು ಸಣ್ಣ ಕೇಬಲ್ (ಸೇವಾ ಪ್ರಧಾನ ಮಾರ್ಗಗಳು ಎಂಬುದಾಗಿ ಕರೆಯಲ್ಪಡುವ–ಸರ್ವೀಸ್ ಮೈನ್ಸ್) ಮೂಲಕ ಪ್ರಸರಣ ಮಾಡಲಾಗುವುದು. ವಿತರಣಾ ಉಪ–ಸ್ಟೇಷನ್, ಫೀಡರ್‌ಗಳು, ಟ್ರಾನ್ಸ್‌ಫಾರ್ಮರ್ ಕೇಂದ್ರಗಳು ಮತ್ತು ಅಂತಿಮ ಮಟ್ಟದ ಬಳಕೆದಾರರುಗಳ ಸ್ಥಳಗಳನ್ನು ಒಳಗೊಂಡಂತೆ ಒಂದು ಮಾದರಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಈ ಕೆಳಗೆ ರೇಖಾಚಿತ್ರದ ರೂಪದಲ್ಲಿ ತೋರಿಸಲಾಗಿದೆ:

**ರೇಖಾಚಿತ್ರ ಸಂಖ್ಯೆ 3.1.1: ಮಾದರಿ ವಿದ್ಯುತ್ ವಿತರಣಾ ವ್ಯವಸ್ಥೆ**



ವಿದ್ಯುತ್ ಬಳಕೆದಾರರ ಮೀಟರ್‌ಗಳಿಗೆ ಮತ್ತು ಡಿಟಿಸಿಗಳಿಗೆ ವಿದ್ಯುತ್ ಬಳಕೆದಾರರುಗಳನ್ನು ವಿದ್ಯುತ್ ಸರಬರಾಜು ಮಾಡಲಾಗುವ ಒಂದು ವಿಶಿಷ್ಟ ಸಂಕೇತಗಳನ್ನು ನೀಡುವ ಮೂಲಕ ಸಂಬಂಧಿತ ಡಿಟಿಸಿಗಳಿಗೆ ಗುರುತುಪಟ್ಟಿ ಮಾಡಲಾಗುವುದು (ಟ್ಯಾಗಿಂಗ್). ವಿದ್ಯುತ್ ಬಳಕೆದಾರರಿಗೆ ಗುರುತುಪಟ್ಟಿ ನೀಡುವ ಉದ್ದೇಶವೆಂದರೆ ಡಿಟಿಸಿ ಮೀಟರ್‌ಗಳಿಂದ ಹೊರಹರಿಯುವ ವಿದ್ಯುತ್ತನ್ನು ಡಿಟಿಸಿ ಅಡಿಯಲ್ಲಿ ಸಂಪರ್ಕಿಸಲಾಗಿರುವ ಬಳಕೆದಾರರ ಮೀಟರಿನೊಂದಿಗೆ ಹೋಲಿಕೆ ಮಾಡುವ ಮೂಲಕ ವರಮಾನ ಸೋರಿಕೆಗಳನ್ನು ಗುರುತಿಸುವುದಾಗಿರುತ್ತದೆ. ಡಿಟಿಸಿಗಳಿಗೆ ಮೀಟರ್ ಅಳವಡಿಸುವುದು ಮತ್ತು ವಿದ್ಯುತ್ ಲೆಕ್ಕಪರಿಶೋಧನೆ[49] ನಡೆಸುವುದು ವಿದ್ಯುತ್ ವಿತರಣಾ ನಷ್ಟಗಳನ್ನು ಸಮರ್ಪಕವಾಗಿ ನಿರ್ಧಾರಣೆ ಮಾಡಲು ಅನುಕೂಲ ಕಲ್ಪಿಸುತ್ತದೆ ಮತ್ತು ಡಿಟಿಸಿ ಮಟ್ಟದಲ್ಲಿ ವಾಣಿಜ್ಯ ನಷ್ಟಗಳನ್ನು ತಡೆಯಲು ಅನುಕೂಲ ಕಲ್ಪಿಸುತ್ತದೆ.

**3.1.2.** ವಿದ್ಯುತ್ ವಿತರಣಾ ನಷ್ಟಗಳನ್ನು ಒಂದು ವಾಸ್ತವಿಕ ಆಧಾರದ ಮೇರೆಗೆ ಅಂದಾಜು ಮಾಡುವ ಸಲುವಾಗಿ ಹಾಗೂ ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ಅದಕ್ಷತೆಯ ಕಾರಣ ವಿದ್ಯುತ್ ಬಳಕೆದಾರರು ಪಾವತಿಸುವುದನ್ನು ತಪ್ಪಿಸುವ ಸಲುವಾಗಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಪ್ರತಿಯೊಂದು ವಿದ್ಯುತ್ ಸರಬರಾಜು ಕಂಪನಿಗೂ ವಿದ್ಯುತ್ ವಿತರಣಾ ನಷ್ಟಗಳಿಗೆ[50] ಸಂಬಂಧಿಸಿದಂತೆ ಗುರಿಗಳನ್ನು ನಿಗದಿಪಡಿಸುವುದು ಹಾಗೂ ಅಂತಹ ನಷ್ಟಗಳನ್ನು ಇಳಿಮುಖಗೊಳಿಸುವಂತೆ ಕಾಲಾನುಕಾಲಕ್ಕೆ ನಿರ್ದೇಶನಗಳನ್ನು ನೀಡುತ್ತಿದೆ.

ವಿದ್ಯುತ್ ದರಪಟ್ಟಿ ಆದೇಶ 2008ರಲ್ಲಿ, ಪ್ರತಿಯೊಂದು ಜವಾಬ್ದಾರಿಯುತ ಕೇಂದ್ರಗಳಲ್ಲಿಯೂ ಸ್ವೀಕರಿಸಲಾದ ವಿದ್ಯುತ್ತನ್ನು ಅಳತೆ ಮಾಡುವ ಸಲುವಾಗಿ ಹಾಗೂ ವಿದ್ಯುತ್ ಮಾರಾಟಗಳನ್ನು ಲೆಕ್ಕ ಇಡುವ ಸಲುವಾಗಿ ವಿದ್ಯುತ್ ಲೆಕ್ಕಪರಿಶೋಧನೆಗಾಗಿ ಒಂದು ಮೀಟರ್ ಅಳವಡಿಸುವ ಯೋಜನೆಯನ್ನು ತಯಾರಿಸುವಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಕೆಇಆರ್‌ಸಿ ನಿರ್ದೇಶಿಸಿತ್ತು. ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಲೆಕ್ಕಪರಿಶೋಧನೆಯನ್ನು ಡಿಟಿಸಿ ಮಟ್ಟದಲ್ಲಿ ಕೈಗೊಳ್ಳುವ ಅಗತ್ಯತೆಯಿತ್ತು ಹಾಗೂ ಸೂಚಿಸಲಾಗಿರುವ ನಷ್ಟದ ಮಟ್ಟಗಳನ್ನು ಸಮರ್ಥಿಸಿಕೊಳ್ಳುವಂತಹ ಸಂಬಂಧಿತ ಅಧ್ಯಯನಗಳ ಬೆಂಬಲದೊಂದಿಗೆ ಪ್ರತೀ ವರ್ಷವೂ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳ ವರದಿ ಸಲ್ಲಿಸಬೇಕಿತ್ತು. ಮುಂದುವರೆದು, ಎಲ್ಲಾ ಡಿಟಿಸಿಗಳಿಗೆ 31 ಡಿಸೆಂಬರ್ 2010ರ ವೇಳೆಗೆ ಮೀಟರ್‌ಗಳನ್ನು ಅಳವಡಿಸುವ ಕಾರ್ಯವನ್ನು ಪೂರ್ಣಗೊಳಿಸುವಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ನಿರ್ದೇಶಿಸಲಾಗಿತ್ತು (ವಿದ್ಯುತ್ ದರಪಟ್ಟಿ 2010). ವಿದ್ಯುತ್ ಸರಬರಾಜು ಕಂಪನಿಗಳು ನಿಗದಿತ ಕಾಲಮಿತಿಯೊಳಗೆ ಮೀಟರ್ ಅಳವಡಿಕೆ ಕಾರ್ಯವನ್ನು ಪೂರ್ಣಗೊಳಿಸಲಿಲ್ಲವಾದ್ದರಿಂದ ಕಾಲಮಿತಿಯನ್ನು ಕಾಲಾನುಕಾಲಕ್ಕೆ ವಿಸ್ತರಿಸುತ್ತಾ ಹೋಗಲಾಯಿತು. ಕೆಇಆರ್‌ಸಿ ಇತ್ತೀಚೆಗೆ ನಿಗದಿಪಡಿಸಿದ್ದ (ವಿದ್ಯುತ್ ದರಪಟ್ಟಿ ಆದೇಶ 2019) ಕಾಲಮಿತಿಯ ಅನುಸಾರ ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವಿಕೆ ಮತ್ತು ವಿದ್ಯುತ್ ಲೆಕ್ಕಪರಿಶೋಧನಾ ವರದಿಗಳ ಸಲ್ಲಿಸುವಿಕೆಯನ್ನು 31 ಮೇ 2019ರ ವೇಳೆಗೆ ಪೂರ್ಣಗೊಳಿಸಬೇಕಿತ್ತು.

ಅದೇ ವೇಳೆಯಲ್ಲಿ, ಫೆಬ್ರವರಿ 2016ರಿಂದ ಜಾರಿಗೆ ತರಲಾದಂತಹ ಕರ್ನಾಟಕ ವಿದ್ಯುತ್ ವಿತರಣಾ ಸಂಹಿತೆ (ಕೆಇಡಿಸಿ), 2015 ಕೂಡ ವಾಣಿಜ್ಯ ಮತ್ತು ತಾಂತ್ರಿಕ ನಷ್ಟಗಳನ್ನು ಇಳಿಮುಖಗೊಳಿಸುವ ಸಲುವಾಗಿ ಡಿಟಿಸಿಗಳ ಜೊತೆಯಲ್ಲಿ ಎಲ್ಲಾ ಬಳಕೆದಾರರುಗಳ ವಿದ್ಯುತ್ ಸ್ಥಾಪಕಗಳ ಮಾಸಿಕ ಮೀಟರ್ ಮಾಪನಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವಿಕೆಯನ್ನು ಹಾಗೂ ಮಾಸಿಕವಾರು ಡಿಟಿಸಿವಾರು ವಿದ್ಯುತ್ ಲೆಕ್ಕಪರಿಶೋಧನೆ ನಡೆಸುವುದನ್ನು ಕಡ್ಡಾಯಗೊಳಿಸಿತ್ತು.

[49] ವಾಸ್ತವಿಕ ವಿದ್ಯುತ್ ಬಳಕೆಗೆ ಹೋಲಿಸಿದಂತೆ ಡಿಟಿಸಿಗಳಿಗೆ ಒಳಹರಿಯುವ ಮತ್ತು ಡಿಟಿಸಿಗಳಿಂದ ಹೊರಹರಿಯುವ ವಿದ್ಯುತ್ತಿನ ನಿರ್ಧಾರಣೆ.

[50] 2008 ಹಣಕಾಸು ಸಾಲಿಗೆ, ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುತ್ ವಿತರಣಾ ನಷ್ಟಗಳು ಶೇಕಡಾ 14.99 ಮತ್ತು ಶೇಕಡಾ 25.64ರ ನಡುವೆ ಆಗಿದ್ದವು (ಬೆಸ್ಕಾಂ–ಶೇಕಡಾ 21.10, ಹೆಸ್ಕಾಂ –ಶೇಕಡಾ 25.64, ಮೆಸ್ಕಾಂ –ಶೇಕಡಾ 14.99)

## ಲೆಕ್ಕಪರಿಶೋಧನೆಯ ವ್ಯಾಪ್ತಿ

**3.1.3.** ವಿದ್ಯುತ್ ಸರಬರಾಜು ಕಂಪನಿಗಳು ಕೇಂದ್ರ ಸರ್ಕಾರದ ಪುರಸ್ಕೃತ ಪುನರ್–ರೂಪಿಸಲ್ಪಟ್ಟ ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣೆಗಳ ಕಾರ್ಯಕ್ರಮ[51] (ಆರ್–ಎಪಿಡಿಆರ್‌ಪಿ) ಅಡಿಯಲ್ಲಿ 98 ಪಟ್ಟಣಗಳಲ್ಲಿ (30,000ಕ್ಕಿಂತ ಅಧಿಕ ಜನಸಂಖ್ಯೆಯಿರುವ ಪಟ್ಟಣಗಳು) ಡಿಟಿಸಿಗಳಲ್ಲಿ ಮೀಟರ್ ಅಳವಡಿಕೆಯನ್ನು ಜುಲೈ 2008ರಲ್ಲಿ ಕೈಗೆತ್ತಿಕೊಂಡವು ಹಾಗೂ ಸೆಪ್ಟಂಬರ್ 2016ರಲ್ಲಿ ಪೂರ್ಣಗೊಳಿಸಿದವು. ಕೆಇಆರ್‌ಸಿ ನಿರ್ದೇಶನಗಳನ್ನು ಅನುಸರಿಸುವ ಉದ್ದೇಶದಿಂದ ವಿದ್ಯುತ್ ಸರಬರಾಜು ಕಂಪನಿಗಳು 2013–14 ಮತ್ತು 2018–19ರ ನಡುವೆ ಆರ್‌ಎಪಿಡಿಆರ್‌ಪಿ–ಅಲ್ಲದ/ಗ್ರಾಮಾಂತರ ಪ್ರದೇಶಗಳಲ್ಲಿನ ಡಿಟಿಸಿಗಳಿಗೆ ಮೀಟರ್ ಅಳವಡಿಕೆ ಕಾರ್ಯವನ್ನು ಸಹ ಕೈಗೆತ್ತಿಕೊಂಡವು. ಈ ಕಾಮಗಾರಿಗಳಿಗೆ (ಆರ್‌ಎಪಿಡಿಆರ್‌ಪಿ–ಅಲ್ಲದ/ಗ್ರಾಮಾಂತರ ಪ್ರದೇಶಗಳು) ಹಣಕಾಸನ್ನು ಒದಗಿಸುವ ಸಲುವಾಗಿ ಸಾಲಗಳನ್ನು (₹ 334.15 ಕೋಟಿ) ಪಡೆಯುವುದರ ಮೂಲಕ ಮತ್ತು ಆಂತರಿಕ ಸಂಪನ್ಮೂಲಗಳ ಮೂಲಕ ಭರಿಸಲಾಯಿತು.

ಪ್ರಸಕ್ತ ಲೆಕ್ಕಪರಿಶೋಧನೆಯು ಮೂರು ವಿದ್ಯುತ್ ಸರಬರಾಜು ಕಂಪನಿಗಳು, ಅವೆಂದರೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ) ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ) 2013–14 ಮತ್ತು 2018–19ರ ನಡುವೆ ಆರ್‌ಎಪಿಡಿಆರ್‌ಪಿ–ಅಲ್ಲದ/ಗ್ರಾಮಾಂತರ ಪ್ರದೇಶಗಳಲ್ಲಿ ಡಿಟಿಸಿಗಳಿಗೆ ಮೀಟರ್‌ಗಳ ಅಳವಡಿಸುವಿಕೆಯನ್ನು ವ್ಯಾಪಿಸಿರುವುದು. ಲೆಕ್ಕಪರಿಶೋಧನೆಯು ಮೂರು ವಿದ್ಯುತ್ ಸರಬರಾಜು ಕಂಪನಿ(ವಿಸಕಂ)ಗಳ ಸಾಂಸ್ಥಿಕ ಕಚೇರಿಗಳಲ್ಲದೆಯೇ 15 ವಿಭಾಗಗಳ[52] ದಾಖಲೆಗಳನ್ನು ಪರಿಶೀಲಿಸಿತು. ಮೂರು ವಿಸಕಂಗಳು ಮಾರ್ಚ್ 2019ರಲ್ಲಿದ್ದಂತೆ, ₹ 449.81 ಕೋಟಿ ಬಂಡವಾಳ ವೆಚ್ಚವನ್ನು ಹಾಗೂ ಡಿಟಿಸಿ ಮೀಟರ್‌ಗಳನ್ನು ಅಳವಡಿಸುವ ಸಲುವಾಗಿ ಪಡೆದುಕೊಳ್ಳಲಾದ ಸಾಲಗಳ ಮೇಲೆ ₹ 133.63 ಕೋಟಿ ಮೊತ್ತದಷ್ಟು ಬಡ್ಡಿ ಪಾವತಿ ಮೇಲಿನ ವೆಚ್ಚಗಳನ್ನು ಭರಿಸಿದ್ದವು.

## ಲೆಕ್ಕಪರಿಶೋಧನೆಯ ಉದ್ದೇಶಗಳು

**3.1.4.** ಲೆಕ್ಕಪರಿಶೋಧನೆಯ ಉದ್ದೇಶಗಳು, ವಿಸಕಂಗಳು

- ಡಿಟಿಸಿಗಳಿಗೆ ಮೀಟರ್ ಅಳವಡಿಸುವ ಕಾಮಗಾರಿಗಳನ್ನು ಅನ್ವಯಿಸುತ್ತಿದ್ದ ನಿಯಮಗಳ ಮತ್ತು ಮಾರ್ಗಸೂಚಿಗಳ ಅನುಸಾರ ಯೋಜಿಸಿದ್ದವೇ ಮತ್ತು ಕಾರ್ಯಗತಗೊಳಿಸಿದ್ದವೇ;
- ಆರ್‌ಎಪಿಡಿಆರ್‌ಪಿ–ಅಲ್ಲದ/ಗ್ರಾಮಾಂತರ ಪ್ರದೇಶಗಳಲ್ಲಿ ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವಿಕೆಯ ಮೇಲಿನ ಕೆಇಆರ್‌ಸಿ ನಿದೇಶನಗಳನ್ನು ಹಾಗೂ ಕರ್ನಾಟಕ ವಿದ್ಯುತ್ ವಿತರಣಾ ಸಂಹಿತೆ, 2015ರ ಅನುವುಗಳನ್ನು ಅನುಸರಿಸಿದ್ದವೇ; ಹಾಗೂ
- ವಿದ್ಯುತ್ ನಷ್ಟಗಳನ್ನು ಗುರಿಯಾಗಿಸಿಕೊಳ್ಳಲಾಗಿದ್ದ ಮಟ್ಟಕ್ಕೆ ಇಳಿಸುವುದಕ್ಕೆ ಡಿಟಿಸಿ ಮಟ್ಟದಲ್ಲಿ ವಿದ್ಯುತ್ ವಿತರಣಾ ನಷ್ಟಗಳನ್ನು ಮೌಲ್ಯಮಾಪನ ಮಾಡುವ ಸಲುವಾಗಿ ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸಿದ್ದವೇ

ಎಂಬುದನ್ನು ಮೌಲ್ಯಮಾಪನ ಮಾಡುವುದಾಗಿತ್ತು.

---

[51] ಪುನರ್–ರೂಪಿಸಲ್ಪಟ್ಟ ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣೆಗಳ ಕಾರ್ಯಕ್ರಮವನ್ನು (ಆರ್–ಎಪಿಡಿಆರ್‌ಪಿ) ಕಾರ್ಯಗತಗೊಳಿಸಿದ್ದರ ಮೇಲಿನ ಸಾಧನಾ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ 31 ಮಾರ್ಚ್ 2016ಕ್ಕೆ ಅಂತ್ಯಗೊಂಡ ಸಾಲಿನ ಕರ್ನಾಟಕ ಸರ್ಕಾರದ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ವರದಿಯಲ್ಲಿ ಸೇರಿಸಲಾಗಿತ್ತು.

[52] **ಬೆಸ್ಕಾಂ** –ಹರಿಹರ, ಹೊಸಕೋಟೆ, ಮಾಗಡಿ ಮತ್ತು ಮಧುಗಿರಿ; **ಹೆಸ್ಕಾಂ** – ಧಾರವಾಡ ಗ್ರಾಮಾಂತರ, ಹಾವೇರಿ, ಶಿರಸಿ, ಬೆಳಗಾವಿ ಗ್ರಾಮೀಣ, ರಾಯಭಾಗ, ಬಿಜಾಪುರ ಮತ್ತು ಬಾಗಲಕೋಟೆ; **ಮೆಸ್ಕಾಂ** – ಬಂಟ್ವಾಳ, ಉಡುಪಿ, ಶಿವಮೊಗ್ಗ ಮತ್ತು ಕಡೂರು.

**ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು**

***ಪೂರ್ವಭಾವಿಯಾಗಿ ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆ***

**3.1.5.1.** ಡಿಟಿಸಿಗಳಿಂದ ವಿದ್ಯುತ್ ಲೆಕ್ಕಪರಿಶೋಧನೆ ಮಾಹಿತಿಯನ್ನು ಸೆರೆಹಿಡಿಯುವುದು, ಡಿಟಿಸಿ ಮತ್ತು ವಿಸಕಂಗಳ ಉಪ-ವಿಭಾಗಗಳಲ್ಲಿನ ಮಾಹಿತಿ ನಿರ್ವಹಣಾ ಕೇಂದ್ರದ ನಡುವೆ ಜಿಪಿಆರ್‌ಎಸ್/ಜಿಎಸ್‌ಎಂ[53] ಜಾಲವನ್ನು ಬಳಸಿಕೊಂಡು ಸಂಪರ್ಕ-ಜಾಲವನ್ನು ಸ್ಥಾಪಿಸುವುದು ಹಾಗೂ ಸಂಬಂಧಿತ ಉಪ-ವಿಭಾಗಗಳಲ್ಲಿ ಸ್ಥಾಪಿಸಲಾಗಿರುವ ಸರ್ವರ್‌ಗೆ ಮಾಹಿತಿಯನ್ನು ನೀಡುವುದನ್ನು ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವ ಯೋಜನೆಯು ಚಿಂತಿಸಿತ್ತು. ಎಲ್ಲಾ ಡಿಟಿಸಿಗಳಿಂದ ಮೀಟರ್ ಮಾಹಿತಿಯನ್ನು ಸ್ವೀಕರಿಸಿದನಂತರ, ಸಂಬಂಧಿತ ಕಾರ್ಯಾಚರಣೆ ಮತ್ತು ನಿರ್ವಹಣೆ (ಓ ಅಂಡ್ ಎಂ) ಉಪ-ವಿಭಾಗಗಳು ಡಿಟಿಸಿ ಮಟ್ಟದಲ್ಲಿ ವಿದ್ಯುತ್ ವಿತರಣಾ ನಷ್ಟಗಳನ್ನು ಅಳೆಯುವ ಸಲುವಾಗಿ ಮತ್ತು ಸರಿಪಡಿಸುವಿಕೆ ಕ್ರಿಯೆಗಾಗಿ ಡಿಟಿಸಿ ಮೀಟರ್ ಮಾಹಿತಿಯನ್ನು ಬಳಕೆದಾರರ ಮೀಟರ್ ಮಾಹಿತಿಯ ಜೊತೆಯಲ್ಲಿ ಮೌಲ್ಯಮಾಪನ ಮಾಡುವವು.

ಮೂರು ವಿದ್ಯುತ್ ಸರಬರಾಜು ಕಂಪನಿಗಳು (ಬೆಸ್ಕಾಂ, ಹೆಸ್ಕಾಂ ಮತ್ತು ಮೆಸ್ಕಾಂ) ಜನವರಿ 2013 ಮತ್ತು ಸೆಪ್ಟೆಂಬರ್ 2015ರ ನಡುವೆ 1,56,174ರ ಪೈಕಿ 1,14,324 ಸಂಖ್ಯೆಗಳಷ್ಟು ಡಿಟಿಸಿಗಳಿಗೆ[54] ಮೀಟರ್‌ಗಳನ್ನು ಅಳವಡಿಸುವ ಸಲುವಾಗಿ ಗುತ್ತಿಗೆಗಳನ್ನು ನೀಡಿದ್ದವು. ಗುತ್ತಿಗೆಗಳನ್ನು ಒಟ್ಟಾರೆ ಟರ್ನ್‌ಕೀ ಆಧಾರದ ಮೇರೆಗೆ, ಅಂದರೆ ಸರಬರಾಜು, ಸ್ಥಾಪನೆ/ಅಳವಡಿಸುವಿಕೆ, ಕಾರ್ಯೋದ್ಯುಕ್ತಗೊಳಿಸುವಿಕೆ ಮತ್ತು ಕಾರ್ಯೋದ್ಯುಕ್ತಗೊಳಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ನಿರ್ವಹಣೆ[55] ಆಧಾರದ ಮೇರೆಗೆ ನೀಡಲಾಯಿತು. ನಿರ್ಮಾಣದ ಅವಧಿಯು ಆರರಿಂದ ಹನ್ನೆರಡು ತಿಂಗಳುಗಳಾಗಿದ್ದವು ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿಯು ಕಾಮಗಾರಿ ಪೂರ್ಣಗೊಂಡ ದಿನಾಂಕದಿಂದ ಐದು ವರ್ಷಗಳ ಅವಧಿ ಆಗಿತ್ತು.

ವಿಸಕಂಗಳು ಕಾಮಗಾರಿ ಆದೇಶಗಳನ್ನು ಕೆಇಆರ್‌ಸಿಯಿಂದ ಪೂರ್ಣಗೊಳ್ಳುವಿಕೆಗೆ ನಿರ್ದಿಷ್ಟಗೊಂಡಿದ್ದ ದಿನಾಂಕದಿಂದ (ಡಿಸೆಂಬರ್ 2010) ಎರಡು ವರ್ಷಗಳಿಂದ ಐದು ವರ್ಷಗಳಿಗೂ ಮೇಲ್ಪಟ್ಟು ವಿಳಂಬದೊಂದಿಗೆ ನೀಡಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯ ಗಮನಿಸಿತು. ಅಂತಹ ವಿಳಂಬಗಳಿಗೆ ದಾಖಲೆಗಳಿಂದ ಕೂಡಿದ ಕಾರಣಗಳಿರಲಿಲ್ಲ. ಮುಂದುವರೆದು, ಗುತ್ತಿಗೆದಾರರುಗಳು ಡಿಟಿಸಿ ಮೀಟರ್‌ಗಳನ್ನು ಸ್ಥಾಪಿಸುವಲ್ಲಿ/ಅಳವಡಿಸುವಲ್ಲಿ ಹಾಗೂ ಅವುಗಳನ್ನು ಕಾರ್ಯೋದ್ಯುಕ್ತಗೊಳಿಸುವಲ್ಲಿ ಗುತ್ತಿಗೆಗಳ ನಿರ್ದಿಷ್ಟ ದಿನಾಂಕಗಳಿಂದ ನಾಲ್ಕರಿಂದ ಹನ್ನೆರಡು[56] ತಿಂಗಳುಗಳ ವಿಳಂಬಗಳನ್ನು ಮಾಡಿದ್ದರು. ವಿಸಕಂಗಳು ಗುತ್ತಿಗೆಗಳಲ್ಲಿನ ನಿಗದಿತ ದಿನಾಂಕಗಳನ್ನು ಮೀರಿದಂತೆ ಡಿಟಿಸಿಗಳಿಗೆ ಮೀಟರ್‌ಗಳ ಅಳವಡಿಕೆಯನ್ನು ಪೂರ್ಣಗೊಳಿಸಲು ಗುತ್ತಿಗೆಗಳನ್ನು ವಿಸ್ತರಿಸಿದ್ದವು. ಬೆಸ್ಕಾಂ ಮತ್ತು ಹೆಸ್ಕಾಂಗಳಿಗೆ ಸಂಬಂಧಿಸಿದಂತೆ, ಗುತ್ತಿಗೆದಾರರುಗಳು ಸ್ಥಾಪನೆಗಳನ್ನು ಮಾಡುವಲ್ಲಿ ವಿಳಂಬಗಳಿಗೆ ದಾಖಲೆಗಳಿಂದ ಕೂಡಿದ ಕಾರಣಗಳಿರಲಿಲ್ಲ, ಆದಾಗ್ಯೂ, ಮೆಸ್ಕಾಂಗೆ ಸಂಬಂಧಿಸಿದಂತೆ ಮಾರ್ಗಗಳ ಅನುಮತಿ ಸಿಗದಿದ್ದುದು ಮತ್ತು ಮಳೆಗಾಲವು ವಿಳಂಬಗಳಿಗೆ ಕಾರಣ

---

53 ಜನರಲ್ ಪಾಕೆಟ್ ರೇಡಿಯೋ ಸರ್ವೀಸ್ (ಜಿಪಿಆರ್‌ಎಸ್)/ಗ್ಲೋಬಲ್ ಸಿಸ್ಟಮ್ ಫಾರ್ ಮೊಬೈಲ್ ಕಮ್ಯುನಿಕೇಷನ್ (ಜಿಎಸ್‌ಎಂ).

54 **ಬೆಸ್ಕಾಂ:** 77,333 ಡಿಟಿಸಿಗಳ ಪೈಕಿ 45,000 ಜನವರಿ 2013ರಲ್ಲಿ; **ಹೆಸ್ಕಾಂ:** 48,969 ಡಿಟಿಸಿಗಳ ಪೈಕಿ 40,793 ಮಾರ್ಚ್ 2014 ಮತ್ತು ಮೇ 2015ರ ನಡುವೆ ಹಾಗೂ **ಮೆಸ್ಕಾಂ:** 29,872 ಡಿಟಿಸಿಗಳ ಪೈಕಿ 28,531 ಸೆಪ್ಟೆಂಬರ್ 2015ರಲ್ಲಿ.

55 ಡಿಟಿಸಿ ಮೀಟರ್‌ಗಳಿಂದ ಮಾಹಿತಿಯನ್ನು ಮಾಹಿತಿ ನಿರ್ವಹಣಾ ಕೇಂದ್ರಕ್ಕೆ ಬರುವಂತೆ ಮಾಡಲು ಹಾಗೂ ವಿಶ್ಲೇಷಿಸಲು ಗುತ್ತಿಗೆದಾರರು ಜವಾಬ್ದಾರರಾಗಿದ್ದರು ಹಾಗೂ ಅಂತಹ ಮಾಹಿತಿಯನ್ನು ಸಂಬಂಧಿತ ಉಪ-ವಿಭಾಗಗಳು ಉಪಯೋಗಿಸಿಕೊಳ್ಳಬೇಕಿತ್ತು.

56 **ಬೆಸ್ಕಾಂ**: ಆದೇಶಿಸಿದ್ದ 45,000 ಡಿಟಿಸಿಗಳು, ನಿರ್ದಿಷ್ಟ ದಿನಾಂಕ ಜುಲೈ 2013ಕ್ಕೆ ಪ್ರತಿಯಾಗಿ ಮಾರ್ಚ್ 2014ರಲ್ಲಿ ಪೂರ್ಣಗೊಳಿಸಲಾಗಿತ್ತು. **ಹೆಸ್ಕಾಂ**: ಆದೇಶಿಸಿದ್ದ 40,793 ಡಿಟಿಸಿಗಳು, ನಿರ್ದಿಷ್ಟ ದಿನಾಂಕಗಳು ಆಗಸ್ಟ್ 2014 ಮತ್ತು ಅಕ್ಟೋಬರ್ 2015 (ಹಂತ-I) ಹಾಗೂ ಜೂನ್ 2015 ಮತ್ತು ಡಿಸೆಂಬರ್ 2015 (ಹಂತ-II)ಕ್ಕೆ ಪ್ರತಿಯಾಗಿ ಜನವರಿ 2015 ಮತ್ತು ಸೆಪ್ಟೆಂಬರ್ 2015 (ಹಂತ-I) ಹಾಗೂ ಮಾರ್ಚ್ 2015 ಮತ್ತು ಡಿಸೆಂಬರ್ 2015ರ (ಹಂತ-II) ನಡುವೆ ಪೂರ್ಣಗೊಳಿಸಲಾಗಿತ್ತು. **ಮೆಸ್ಕಾಂ**: ಆದೇಶಿಸಿದ್ದ 28,531, ನಿರ್ದಿಷ್ಟ ದಿನಾಂಕ ಏಪ್ರಿಲ್ 2016 ಮತ್ತು ನವೆಂಬರ್ 2016ರ ನಡುವಿಗೆ ಪ್ರತಿಯಾಗಿ ನವೆಂಬರ್ 2017ರಲ್ಲಿ ಪೂರ್ಣಗೊಳಿಸಲಾಗಿತ್ತು.

ಎಂಬುದಾಗಿ ತಿಳಿಸಲಾಗಿತ್ತು. ಹೀಗಾಗಿ ವಿಸಕಂಗಳು ಕಾಮಗಾರಿಗಳನ್ನು ಸಮಯೋಚಿತವಾಗಿ ಕೈಗೆತ್ತಿಕೊಂಡಿರಲಿಲ್ಲ ಹಾಗೂ ಸಮಯೋಚಿತವಾಗಿ ಪೂರ್ಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲಿಲ್ಲ.

ಆರ್‌ಎಪಿಡಿಆರ್‌ಪಿ ಅಡಿಯಲ್ಲಿ ನಗರ ಪ್ರದೇಶಗಳಲ್ಲಿನ ಡಿಟಿಸಿಗಳಲ್ಲಿ ಮೀಟರ್ ಅಳವಡಿಕೆಯನ್ನು ಪ್ರಾರಂಭಿಕವಾಗಿ 2007–08ರಲ್ಲಿ ಕೈಗೆತ್ತಿಕೊಳ್ಳಲಾಗಿತ್ತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಜೂನ್ 2020). ಅಧಿಕ ಸಂಖ್ಯೆಗಳಲ್ಲಿದ್ದ ಡಿಟಿಸಿಗಳ ಕಾರಣ ಹಾಗೂ ಬೃಹತ್ ಮೊತ್ತದ ಹೂಡಿಕೆಯು ಒಳಗೊಂಡಿತ್ತಾದ್ದರಿಂದ ಎಲ್ಲಾ ಡಿಟಿಸಿಗಳಲ್ಲಿ ಮೀಟರ್‌ಗಳ ಅಳವಡಿಸುವಿಕೆಯನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಮಾರ್ಗ ಅನುಮತಿ, ಮಳೆಗಾಲ ಮತ್ತು ಸಾಮಗ್ರಿಗಳ ಖರೀದಿಯಲ್ಲಿನ ವಿಳಂಬ, ಇವುಗಳ ಕಾರಣ ಗುತ್ತಿಗೆಗಳನ್ನು ವಿಸ್ತರಿಸಲಾಗಿತ್ತು ಎಂಬುದಾಗಿಯೂ ತಿಳಿಸಿತು.

ಆದಾಗ್ಯೂ, ವಿಸಕಂಗಳು ಕೆಇಆರ್‌ಸಿ ನಿರ್ದೇಶನಗಳಿಗೆ ಬದ್ಧವಾಗಿರುವಲ್ಲಿ ವಿಫಲಗೊಂಡಿದ್ದವು ಎಂಬ ವಾಸ್ತವಾಂಶವು ಉಳಿದುಕೊಂಡಿತ್ತು. ಮುಂದುವರೆದು, ವಿದ್ಯುತ್ ಮಾರ್ಗ ಅನುಮತಿಯು ಲಭ್ಯವಿರದಿದ್ದುದು ಮತ್ತು ಸರಕುಗಳ ಖರೀದಿಯಲ್ಲಿನ ವಿಳಂಬವು ಲೋಪದೋಷಗಳಿಂದ ಕೂಡಿದ ಪೂರ್ವಭಾವಿ ಯೋಜನೆಯನ್ನು ಸೂಚಿಸುತ್ತಿತ್ತು.

**3.1.5.2.** ಉಳಿಕೆ ಡಿಟಿಸಿಗಳು (45,992 ಸಂಖ್ಯೆಗಳು) ಮತ್ತು ತದನಂತರದಲ್ಲಿ ವ್ಯವಸ್ಥೆಯಲ್ಲಿ ಹೆಚ್ಚಳಗೊಳಿಸಲ್ಪಟ್ಟವುಗಳಿಗೆ (66,302 ಸಂಖ್ಯೆಗಳು) ಸಂಬಂಧಿಸಿದಂತೆ ವಿಸಕಂಗಳು ಮೀಟರ್ ಅಳವಡಿಕೆ ಕಾರ್ಯವನ್ನು ಕೈಗೆತ್ತಿಕೊಂಡಿರಲಿಲ್ಲ. ಮೀಟರ್ ಅಳವಡಿಕೆಯು ಬಾಕಿಯಿರುವ ಉಳಿಕೆ ಡಿಟಿಸಿಗಳು ಮತ್ತು ಹೆಚ್ಚಳಗೊಳಿಸಲ್ಪಟ್ಟಿದ್ದ ಡಿಟಿಸಿಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 3.1.1: ಹೆಚ್ಚಳಗೊಳಿಸಲ್ಪಟ್ಟಿರುವ ಡಿಟಿಸಿಗಳು ಮತ್ತು ಮೀಟರ್‌ಗಳನ್ನು ಅಳವಡಿಸಲು ಬಾಕಿಯಿರುವ ಡಿಟಿಸಿಗಳ ವಿವರಗಳು**

| ಕ್ರಮ ಸಂಖ್ಯೆ | ವಿಸಕಂ | ಮೀಟರ್‌ಗಳನ್ನು ಅಳವಡಿಸಬೇಕಾದ ಡಿಟಿಸಿಗಳು | ಮೀಟರ್‌ಗಳನ್ನು ಅಳವಡಿಸಲಾದ ಡಿಟಿಸಿಗಳು | ಮೀಟರ್‌ಗಳನ್ನು ಅಳವಡಿಸಬೇಕಾದ ಉಳಿಕೆ ಡಿಟಿಸಿಗಳು | ಹೆಚ್ಚುವರಿ ಡಿಟಿಸಿಗಳು | ಮೀಟರ್‌ಗಳನ್ನು ಅಳವಡಿಸಬೇಕಾದ ಡಿಟಿಸಿಗಳು (ಮಾರ್ಚ್/ಜೂನ್ 2019ರಲ್ಲಿದ್ದಂತೆ) |
|---|---|---|---|---|---|---|
| 1 | ಬೆಸ್ಕಾಂ | 77,333 | 37,058[57] | 40,275 | 25,189 | 65,464 |
| 2 | ಹೆಸ್ಕಾಂ | 48,969 | 43,252 | 5,717 | 8,970 | 14,687 |
| 3 | ಮೆಸ್ಕಾಂ | 29,872 | 31,218[58] | – | 32,143 | 32,143 |

(ಮೂಲ: ವಿಸಕಂಗಳು ಒದಗಿಸಿದ ಮಾಹಿತಿ)

ವ್ಯವಸ್ಥೆಯಲ್ಲಿ ಹೆಚ್ಚಳಗೊಳಿಸಲ್ಪಟ್ಟ ಡಿಟಿಸಿಗಳ ಸಂಖ್ಯೆಗಳು ಗಮನಾರ್ಹವಾಗಿದ್ದವಾದರೂ, ವಿಸಕಂಗಳು ಈ ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವ ಸಲುವಾಗಿ ಯಾವುದೇ ಪೂರ್ವಭಾವಿ ಯೋಜನೆಯನ್ನು ರೂಪಿಸುವಲ್ಲಿ ವಿಫಲಗೊಂಡಿದ್ದವು. ಬೆಸ್ಕಾಂ ನಲ್ಲಿ, ಇನ್ನೂ ಹೆಚ್ಚಿನ ಸಂಖ್ಯೆಯ ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮೊದಲು ಈವರೆಗೆ ಅಳವಡಿಸಿರುವುದರಿಂದ ಎಷ್ಟರಮಟ್ಟಿಗೆ ಪ್ರಯೋಜನಗಳನ್ನು ಪಡೆದುಕೊಳ್ಳಲಾಗಿದೆ ಎಂಬುದನ್ನು ಡಿಟಿಸಿಗಳ ಮೀಟರ್ ಅಳವಡಿಕೆ ನಂತರದ ವಿಶ್ಲೇಷಣೆ ಕೈಗೊಳ್ಳುವ ಸಲುವಾಗಿ ನಿರ್ದೇಶಕರುಗಳ ಮಂಡಳಿಯು ತೀರ್ಮಾನವನ್ನು ತೆಗೆದುಕೊಂಡಿತ್ತು (ಮಾರ್ಚ್ 2013). ಆದಾಗ್ಯೂ, ಕಂಪನಿಯು ಪೂರ್ಣಗೊಂಡಿರುವ ಪ್ರಕರಣಗಳಲ್ಲಿ ಆ ರೀತಿಯ ವಿಶ್ಲೇಷಣೆ ನಡೆಸಿರಲಿಲ್ಲ. ಡಿಟಿಸಿ ಮಟ್ಟದಲ್ಲಿ ಒಟ್ಟಾರೆ ನಷ್ಟಗಳನ್ನು ಲೆಕ್ಕಹಾಕುವ ಸಲುವಾಗಿ, ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿನ ಎಲ್ಲಾ ಡಿಟಿಸಿಗಳಿಗೆ ಮೀಟರ್ ಅಳವಡಿಕೆಯನ್ನು ಖಚಿತಪಡಿಸಿಕೊಳ್ಳುವುದು ಅತ್ಯಗತ್ಯವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬೆಸ್ಕಾಂ ಮತ್ತು ಹೆಸ್ಕಾಂ ಪ್ರಸ್ತುತ ಇದ್ದಂತಹ ಡಿಟಿಸಿಗಳಿಗೆ ಮೀಟರ್‌ಗಳ ಅಳವಡಿಕೆಯನ್ನು ಪೂರ್ಣಗೊಳಿಸಿರಲಿಲ್ಲ ಮತ್ತು ಮೆಸ್ಕಾಂ ಹೊಸದಾಗಿ ಸೇರಿಸಲಾಗಿದ್ದ

[57] 45,000 ಡಿಟಿಸಿಗಳಿಗೆ ವಹಿಸಿದ್ದರೂ ಆರ್‌ಎಪಿಡಿಆರ್‌ಪಿಯೇತರ ಗ್ರಾಮೀಣ ಪ್ರದೇಶಗಳಲ್ಲಿ ಕೇವಲ 37,058 ಡಿಟಿಸಿಗಳಿಗೆ ಮಾತ್ರ ಮೀಟರ್ ಅಳವಡಿಸಲಾಗತ್ತು. ಉಳಿದ ಮೀಟರ್‌ಗಳನ್ನು ನೀರಾವರಿ ಪಂಪ್‌ಸೆಟ್ ಸ್ಥಾಪನಗಳಿಗೆ ಅಳವಡಿಸಲಾಗಿತ್ತು. ಆದುದರಿಂದ 37,058 ಮಾತ್ರ ಪರಿಗಣಿಸಲಾಗಿದೆ.

[58] ಗುತ್ತಿಗೆಯು ಪ್ರಸ್ತುತದಲ್ಲಿರುವಾಗಲೇ 2,687 ಡಿಟಿಸಿಗಳನ್ನು ಮೀಟರಿಂಗ್‌ಗಾಗಿ ಹೆಚ್ಚುವರಿಯಾಗಿ ವಹಿಸಲಾಗಿತ್ತು.

ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರಲಿಲ್ಲವಾದ್ದರಿಂದ, ವಿಸಕಂಗಳು 31 ಮಾರ್ಚ್ 2019ರಲ್ಲಿದ್ದಂತೆ ₹ 449.81 ಕೋಟಿ ಮೊತ್ತದಷ್ಟು ಬಂಡವಾಳ ವೆಚ್ಚವನ್ನು ಭರಿಸಿದ್ದ ಹೊರತಾಗಿಯೂ ಹಾಗೂ ₹ 133.63 ಕೋಟಿ ಮೊತ್ತದಷ್ಟು ಬಡ್ಡಿ ಪಾವತಿ ಮೇಲಿನ ವೆಚ್ಚವನ್ನು ಭರಿಸಿದ್ದಾಗ್ಯೂ, ಒಟ್ಟಾರೆ ವಿದ್ಯುತ್ ನಷ್ಟಗಳನ್ನು ಲೆಕ್ಕಹಾಕಲಾಗಲಿಲ್ಲ. ಅಲ್ಲದೆಯೇ, ವಿಸಕಂಗಳು ಬಾಕಿ ಇರುವ ಸಾಲಗಳ ಮೇಲೆ ₹ 40.43 ಕೋಟಿ[59] ಮೊತ್ತದಷ್ಟರ ಮಟ್ಟಿಗೆ ಅವಿರತವಾಗಿ ವಾರ್ಷಿಕ ಬಡ್ಡಿ ಪಾವತಿ ವೆಚ್ಚಗಳನ್ನು ಭರಿಸುವಂತಾಗಿತ್ತು.

ಕೆಇಆರ್‌ಸಿ ನಿರ್ದೇಶನಗಳ (ಸೆಪ್ಟಂಬರ್ 2019) ಅನುಸಾರ ಈಗಾಗಲೇ ಮೀಟರ್‌ಗಳನ್ನು ಅಳವಡಿಸಲಾಗಿರುವ ಡಿಟಿಸಿಗಳಲ್ಲಿನ ಅಡಚಣೆಗಳನ್ನು (ಜಾಲಸಂಪರ್ಕ ಮತ್ತು ಸಂದೇಶ ರವಾನೆ ಸಮಸ್ಯೆಗಳು) ಬಗೆಹರಿಸಿದನಂತರ ಹೆಚ್ಚಳಗೊಳಿಸಲ್ಪಟ್ಟಿರುವ ಡಿಟಿಸಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂಬುದಾಗಿ ಸರ್ಕಾರವು ತನ್ನ ಉತ್ತರದಲ್ಲಿ ತಿಳಿಸಿತು (ಜೂನ್ 2020).

ಆದಾಗ್ಯೂ, ಕೆಇಆರ್‌ಸಿ, ವರ್ಷದಿಂದ ವರ್ಷಕ್ಕೆ ಪದೇಪದೇ ನಿರ್ದೇಶನಗಳನ್ನು ನೀಡುತ್ತಾ ಬಂದಿದ್ದಾಗ್ಯೂ ವಿಸಕಂಗಳು ಮಾರ್ಚ್/ಜೂನ್ 2019ರಲ್ಲಿದ್ದಂತೆ ಪ್ರಸಕ್ತ ಇದ್ದಂತಹ ಡಿಟಿಸಿಗಳಿಗೂ ಮೀಟರ್‌ಗಳನ್ನು ಅಳವಡಿಸುವಲ್ಲಿ ಹಾಗೂ ಗಮನಾರ್ಹವಾದಂತಹ ಸಮಯವು ಕಳೆದು ಹೋದನಂತರವೂ ವಿದ್ಯುತ್ ಲೆಕ್ಕಪರಿಶೋಧನೆ ನಡೆಸುವಲ್ಲಿನ ಅಡಚಣೆಗಳನ್ನು ಬಗೆಹರಿಸುವಲ್ಲಿ ವಿಫಲಗೊಂಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**3.1.5.3** ಕೆಲವು ಡಿಟಿಸಿಗಳಲ್ಲಿ ಅಳವಡಿಸಲಾಗಿರುವ ಮೀಟರ್‌ಗಳು ಕೂಡ ಸಂದೇಶಗಳನ್ನು ನೀಡುತ್ತಿರಲಿಲ್ಲ ಹಾಗೂ ಇದು ವಿದ್ಯುತ್ ಲೆಕ್ಕಪರಿಶೋಧನೆ ನಡೆಸುವ ಸಲುವಾಗಿ ಮೀಟರ್ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅಡಚಣೆಯಾಗಿತ್ತು ಎಂಬುದನ್ನೂ ಲೆಕ್ಕಪರಿಶೋಧನೆಯು ಗಮನಿಸಿತು. ಮಾರ್ಚ್ 2020ರಲ್ಲಿದ್ದಂತೆ, ಸಂಬಂಧಿತ ಕಾರ್ಯನಿರ್ವಾಹಕ ಇಂಜಿನಿಯರುಗಳ/ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುಗಳು ಗುತ್ತಿಗೆದಾರರುಗಳಿಗೆ ಬಿಲ್ಲುಗಳ ಪಾವತಿ ಮಾಡುವ ಸಮಯದಲ್ಲಿ ಮೀಟರ್‌ಗಳನ್ನು ಯಶಸ್ವಿಯಾಗಿ ಕಾರ್ಯೋದ್ಯುಕ್ತಗೊಳಿಸಲಾಗಿದೆ ಎಂಬುದಾಗಿ ಪ್ರಮಾಣೀಕರಿಸಿದ್ದರಾದರೂ, ಬೆಸ್ಕಾಂನಲ್ಲಿನ 8,470 ಮೀಟರ್‌ಗಳು, ಹೆಸ್ಕಾಂ ನಲ್ಲಿನ 6,683 ಮೀಟರ್‌ಗಳು ಹಾಗೂ ಮೆಸ್ಕಾಂನಲ್ಲಿನ 15,926 ಮೀಟರ್‌ಗಳು ಸಂದೇಶಗಳನ್ನು ನೀಡುತ್ತಿರಲಿಲ್ಲ.

ಅಲ್ಲದೆಯೇ, ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವ ಗುತ್ತಿಗೆಗಳು ಕಾರ್ಯೋದ್ಯುಕ್ತಗೊಳಿಸಿದನಂತರ ಐದು ವರ್ಷಗಳವರೆಗೆ ನಿರ್ವಹಣೆಯನ್ನೂ ಒಳಗೊಂಡಿದ್ದವು. ನಿರ್ವಹಣಾ ಗುತ್ತಿಗೆಯ ಷರತ್ತುಗಳ ಅನುಸಾರ, ಡಿಟಿಸಿ ಮತ್ತು ವಿಸಕಂಗಳ ಮಾಹಿತಿ ನಿರ್ವಹಣಾ ಕೇಂದ್ರದ ನಡುವೆ ಜಿಪಿಆರ್‌ಎಸ್/ಜಿಎಸ್‌ಎಂ ಸಂಪರ್ಕ ಜಾಲ ಬಳಸಿಕೊಂಡು ಸಂದೇಶ ರವಾನೆಯನ್ನು ಖಚಿತಪಡಿಸಿಕೊಳ್ಳುವುದು ಹಾಗೂ ವಿದ್ಯುತ್ ಲೆಕ್ಕಪರಿಶೋಧನೆಗೆ ಅನುಕೂಲ ಕಲ್ಪಿಸಿಕೊಡುವ ಸಲುವಾಗಿ ಮಾಹಿತಿ ನಿರ್ವಹಣಾ ಕೇಂದ್ರದ ಸರ್ವರ್‌ನಲ್ಲಿ ಎಲ್ಲಾ ಮೀಟರ್ ಮಾಹಿತಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು ಗುತ್ತಿಗೆದಾರರುಗಳ ಜವಾಬ್ದಾರಿಯಾಗಿತ್ತು. ನಿರ್ವಹಣಾ ಗುತ್ತಿಗೆಯನ್ನು ಹೊಂದಿದ್ದ ಹೊರತಾಗಿಯೂ, ಮೀಟರ್‌ಗಳಿಂದ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವಲ್ಲಿನ ಸಮಸ್ಯೆಯು ಪದೇಪದೇ ಉದ್ಭವಿಸುತ್ತಿತ್ತು, ಇದರಿಂದಾಗಿ ಮೀಟರ್‌ಗಳ ಅಳವಡಿಕೆಯ ಮೂಲ ಉದ್ದೇಶವನ್ನು ವಿಫಲಗೊಳಿಸಲಾಗಿತ್ತು.

ಮಾಹಿತಿ ಸಂದೇಶ ನೀಡಿಕೆ ಮತ್ತು ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದನ್ನು ಖಚಿತಪಡಿಸಿಕೊಂಡನಂತರವಷ್ಟೇ ಪಾವತಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು. (ಜೂನ್ 2020) ತದನಂತರದಲ್ಲಿ ಈ ಮೀಟರ್‌ಗಳು ಸಂದೇಶಗಳನ್ನು ನೀಡದಿರುವಿಕೆಯು ಸಂಪರ್ಕ ಜಾಲ ಮತ್ತು ಇತರೆ ಸಮಸ್ಯೆಗಳ ಕಾರಣದಿಂದ ಆಗಿತ್ತು ಹಾಗೂ ಈ ಸಮಸ್ಯೆಗಳನ್ನು ಸರಿಪಡಿಸುವಂತೆ ಗುತ್ತಿಗೆದಾರ ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ. ಬೃಹತ್ ಮೊತ್ತದ ವೆಚ್ಚಗಳನ್ನು ಭರಿಸಿದನಂತರವೂ ಅಳವಡಿಸಲಾಗಿರುವ ಮೀಟರ್‌ಗಳು ಗುರಿಯಾಗಿಸಿಕೊಳ್ಳಲಾಗಿರುವ ಉದ್ದೇಶವನ್ನು ಈಡೇರಿಸುತ್ತಿಲ್ಲ ಎಂಬ ವಾಸ್ತವಾಂಶವು ಉಳಿದುಕೊಂಡಿರುವುದು. ಉತ್ತಮ ಸಂಪರ್ಕ

---

[59] ಬೆಸ್ಕಾಂ – ₹ 28.63 ಕೋಟಿ; ಹೆಸ್ಕಾಂ – ₹ 7.93 ಕೋಟಿ; ಮೆಸ್ಕಾಂ – ₹ 3.87 ಕೋಟಿ.

ಜಾಲತಾಣದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಗುತ್ತಿಗೆ ಷರತ್ತುಗಳನ್ನು ಒತ್ತಾಯಪೂರ್ವಕವಾಗಿ ಜಾರಿಗೊಳಿಸುವಲ್ಲಿನ ಕಂಪನಿಯ ವಿಫಲತೆಯಿಂದ ವಿದ್ಯುತ್ ಲೆಕ್ಕಪರಿಶೋಧನೆಯ ಮೂಲಕ ನೈಜತೆಯಿಂದ ಕೂಡಿದ ವಿತರಣಾ ನಷ್ಟಗಳ ಅಂದಾಜು ಮಾಡಲು ನಿಖರವಾದ ಮಾಹಿತಿ ಲಭ್ಯವಿರಲಿಲ್ಲ.

***ಗುತ್ತಿಗೆ ಷರತ್ತುಗಳ ಉಲ್ಲಂಘನೆ***

**3.1.6**. ಡಿಟಿಸಿಗಳಿಗೆ ಮೀಟರ್ ಅಳವಡಿಕೆಗಾಗಿನ ಗುತ್ತಿಗೆಯ ವ್ಯಾಪ್ತಿಯು (ಒಡಂಬಡಿಕೆಯ ಷರತ್ತು ಸಂಖ್ಯೆ 3.2 ಹಾಗೂ ಡಿಡಬ್ಲ್ಯುಎ ಅಡಿಯಲ್ಲಿನ ಅಂಶ ಸಂಖ್ಯೆ 20.01 (ಎ)) 'ಕೈಬಿಡಲಾಗಿರುವವುಗಳು' ಅಡಿಯಲ್ಲಿನ ನಿರ್ದಿಷ್ಟನಿರೂಪಣೆಗಳಲ್ಲಿ ಅಥವಾ ಕಾಮಗಾರಿ ನೀಡಿಕೆ ಪತ್ರದಲ್ಲಿ ನಿರ್ದಿಷ್ಟವಾಗಿ ಕೈಬಿಡಲಾಗಿದ್ದರ ಹೊರತು, ಉಪಕರಣವನ್ನು ಯಶಸ್ವಿಯಾಗಿ, ದಕ್ಷತೆಯಿಂದ ಮತ್ತು ಸುರಕ್ಷಿತವಾಗಿರುವಂತೆ ಹಾಗೂ ವಿಶ್ವಸನೀಯವಾಗಿ ಕಾರ್ಯಾಚರಣೆಗೊಳಿಸುವ ಸಲುವಾಗಿ ಅಗತ್ಯವಿರುವಂತಹ ಎಲ್ಲಾ ಬಾಬುಗಳನ್ನು/ಉಪಕರಣಗಳನ್ನು ಸ್ಥಾಪಿಸುವುದು ಮತ್ತು ಕಾರ್ಯೋದ್ಯುಕ್ತಗೊಳಿಸುವುದನ್ನು ಒಳಗೊಂಡಿತ್ತು. ನಿರ್ದಿಷ್ಟವಾಗಿ ತಿಳಿಸಿರದ, ಆದರೆ ಈ ಕಾಮಗಾರಿಗಳ ತೃಪ್ತಿದಾಯಕ ಕಾರ್ಯನಿರ್ವಹಣೆ ಮತ್ತು ಪೂರ್ಣಗೊಳಿಸುವಿಕೆಗೆ ಅತ್ಯಗತ್ಯವಾಗಿರುವಂತಹ ಇತರೆ ಯಾವುದೇ ಬಾಬುಗಳು/ಉಪಕರಣಗಳನ್ನು ಕಾಮಗಾರಿಗಳ ವ್ಯಾಪ್ತಿಯಲ್ಲಿ ಸೇರಿಸಲಾಗಿದೆ ಎಂಬುದಾಗಿ ಭಾವಿಸತಕ್ಕದು ಹಾಗೂ ಅಂತಹವುಗಳನ್ನು ಗುತ್ತಿಗೆದಾರರು ವಿಸಕಂಗಳಿಗೆ ಯಾವುದೇ ಹೆಚ್ಚುವರಿ ವೆಚ್ಚಗಳ ಹೊರೆಯಾಗದಂತೆ ಕಾರ್ಯಗತಗೊಳಿಸತಕ್ಕದ್ದು.

ಆದಾಗ್ಯೂ, ಎರಡು ವಿಸಕಂಗಳು ಅವೆಂದರೆ ಬೆಸ್ಕಾಂ ಮತ್ತು ಹೆಸ್ಕಾಂ ಡಿಟಿಸಿ ಮೀಟರ್‌ಗಳ ಕಾರ್ಯೋದ್ಯುಕ್ತಗೊಳಿಸುವಿಕೆಗೆ ಅತ್ಯಗತ್ಯವಾಗಿದ್ದಂತಹ ಹಾಗೂ ಗುತ್ತಿಗೆ ಷರತ್ತುಗಳ ಅನುಸಾರ ಗುತ್ತಿಗೆದಾರರುಗಳು ವೆಚ್ಚಗಳನ್ನು ಭರಿಸಬೇಕಿದ್ದಂತಹ ಲೀಡ್ ವೈರುಗಳನ್ನು ಮತ್ತು ತಾಮ್ರ/ಅಲ್ಯುಮಿನಿಯಮ್ ಲಗ್‌ಗಳನ್ನು[60] ವಿಸಕಂಗಳ ಕಡೆಯಿಂದ ವೆಚ್ಚವನ್ನು ಭರಿಸುವ ಮೂಲಕ ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿ ಗುತ್ತಿಗೆದಾರರುಗಳಿಗೆ ಸರಬರಾಜು ಮಾಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬೆಸ್ಕಾಂ ಮತ್ತು ಹೆಸ್ಕಾಂ ಲೀಡ್ ವೈರುಗಳನ್ನು ಮತ್ತು ತಾಮ್ರ/ಅಲ್ಯುಮಿನಿಯಮ್ ಲಗ್‌ಗಳ ಸರಬರಾಜಿನ ಕಡೆಗೆ ಗುತ್ತಿಗೆ ಷರತ್ತುಗಳನ್ನು[61] ಉಲ್ಲಂಘಿಸಿ ಅನುಕ್ರಮವಾಗಿ ₹ 7.07 ಕೋಟಿ[62] ಮತ್ತು ₹ 7.33 ಕೋಟಿ ವೆಚ್ಚಗಳನ್ನು ಭರಿಸಿದ್ದವು. ಈ ರೀತಿಯಾಗಿ, ₹ 14.40 ಕೋಟಿ ಮೊತ್ತದಷ್ಟು ಪಾವತಿಯು, ಅಷ್ಟರಮಟ್ಟಿಗೆ ಗುತ್ತಿಗೆದಾರರುಗಳಿಗೆ ಅರ್ಹವಲ್ಲದ ಲಾಭಗಳನ್ನು ಮಾಡಿಕೊಟ್ಟಂತಾಗಿತ್ತು ಮತ್ತು ವಿಸಕಂಗಳಿಗೆ ತಪ್ಪಿಸಬಹುದಾದ ಅಧಿಕ ಆರ್ಥಿಕ ಹೊರೆಗೆ ಕಾರಣವಾಯಿತು.

ಲೀಡ್ ವೈರು ಮತ್ತು ಬಿಡಿಭಾಗಗಳ ಸರಬರಾಜನ್ನು ಬಿಡ್ಡರುಗಳ ವ್ಯಾಪ್ತಿಯಲ್ಲಿ ಸೇರಿಸಿರಲಿಲ್ಲ ಮತ್ತು ಅವುಗಳು ಮೀಟರ್‌ಗಳ ಅಳವಡಿಕೆಗೆ ಅತ್ಯಗತ್ಯವಾಗಿ ಬೇಕಿದ್ದರಿಂದ ವೆಚ್ಚವನ್ನು ಭರಿಸಲಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಜೂನ್ 2020).

ಉಪಕರಣದ ಯಶಸ್ವಿ, ದಕ್ಷ, ಸುರಕ್ಷಿತ ಮತ್ತು ವಿಶ್ವಸನೀಯ ಕಾರ್ಯಾಚರಣೆಗಾಗಿ ಅತ್ಯಗತ್ಯವಾಗಿದ್ದಂತಹ ಎಲ್ಲಾ ಅಂಶಗಳ ಅಳವಡಿಸುವಿಕೆ/ಸ್ಥಾಪಿಸುವಿಕೆ ಮತ್ತು ಕಾರ್ಯೋದ್ಯುಕ್ತಗೊಳಿಸುವಿಕೆಯನ್ನು ಗುತ್ತಿಗೆಯ ವ್ಯಾಪ್ತಿಯು ಒಳಗೊಂಡಿತ್ತಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಉತ್ತರದಲ್ಲಿ ಖಚಿತಪಡಿಸಿರುವಂತೆ, ಲೀಡ್ ವೈರುಗಳು ಮತ್ತು ಇತರೆ ಬಿಡಿಭಾಗಗಳು ಮೀಟರ್‌ಗಳ ಅಳವಡಿಕೆಗೆ ಅತ್ಯಗತ್ಯವಾಗಿದ್ದವು ಮತ್ತು ಆದ್ದರಿಂದ ಅವುಗಳು ಸವಾಲುದಾರರ

---

60 ಲೀಡ್ ವೈರುಗಳೆಂದರೆ ಟ್ರಾನ್ಸ್‌ಫಾರ್ಮರನ್ನು ಡಿಟಿಸಿ ಮೀಟರಿನ ಜೊತೆ ಸಂಪರ್ಕಿಸಲು ಬಳಸಲಾಗುವ ಕೇಬಲ್ಲುಗಳು ಮತ್ತು ಲಗ್‌ಗಳು ಕೇಬಲ್ಲುಗಳನ್ನು ಡಿಟಿಸಿ ಮೀಟರ್‌ಗೆ ಸಂಪರ್ಕಿಸುತ್ತವೆ.

61 ಲೆಕ್ಕಪರಿಶೋಧನೆಯು ಈ ಅಂಶವನ್ನು ಮೆಸ್ಕಾಂನಲ್ಲಿ ಗಮನಿಸಲಿಲ್ಲ.

62 ಮೆ. ಜಿನಸ್ ಪವರ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ₹ 1.50 ಕೋಟಿ ಮತ್ತು ಮೆ. ಏಷಿಯನ್ ಪ್ಯಾಬ್ ಟೆಕ್ ಲಿಮಿಟೆಡ್‌ಗೆ ₹ 5.57 ಕೋಟಿ.

ವ್ಯಾಪ್ತಿಯಲ್ಲಿ ಬರುವವು. ಆದ್ದರಿಂದ, ವಿಸಕಂಗಳು ಭರಿಸಿದ ₹ 14.40 ಕೋಟಿ ಮೊತ್ತದಷ್ಟು ವೆಚ್ಚಗಳು ಸಮರ್ಥನೆಯಿಂದ ಕೂಡಿರಲಿಲ್ಲ.

***ವಿದ್ಯುತ್ ಲೆಕ್ಕಪರಿಶೋಧನೆ ನಡೆಸದಿದ್ದುದು***

**3.1.7.1.** ವಿಸಕಂಗಳು, ಮೀಟರ್‌ಗಳನ್ನು ಅಳವಡಿಸಲಾಗಿದ್ದ ಎಲ್ಲಾ ಡಿಟಿಸಿಗಳಿಗೆ ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ವಿಫಲಗೊಂಡಿದ್ದವು. ಮೀಟರ್‌ಗಳನ್ನು ಅಳವಡಿಸಲಾಗಿದ್ದ ಡಿಟಿಸಿಗಳ ಪೈಕಿ ಬೆಸ್ಕಾಂ ಮತ್ತು ಹೆಸ್ಕಾಂನಲ್ಲಿ ಕೇವಲ ಶೇಕಡಾ 60ರಷ್ಟನ್ನು ಮತ್ತು ಮೆಸ್ಕಾಂನಲ್ಲಿ ಶೇಕಾಡಾ 43ರಷ್ಟನ್ನು ವಿದ್ಯುತ್ ಲೆಕ್ಕಪರಿಶೋಧನೆ[63] ಮಾಡಲಾಗಿತ್ತು. ಈ ವಿಷಯವನ್ನು ಕೆಇಆರ್‌ಸಿ ಗಂಭೀರವಾಗಿ ಪರಿಗಣಿಸಿತು (ದರಪಟ್ಟಿ ಆದೇಶ 2015 ಮತ್ತು 2016) ಹಾಗೂ ಮೀಟರ್‌ಗಳ ಅಳವಡಿಕೆಯು ಪೂರ್ಣಗೊಂಡಿರುವ ಡಿಟಿಸಿಗಳನ್ನೂ ವಿದ್ಯುತ್ ಲೆಕ್ಕಪರಿಶೋಧನೆಗೆ ಒಳಪಡಿಸದಿರುವುದು ಅವುಗಳಿಗೆ ಒಂದು ಗಮನಾರ್ಹವಾದ ವೆಚ್ಚವನ್ನು ಭರಿಸುವ ಮೂಲಕ ಮೀಟರ್‌ಗಳನ್ನು ಅಳವಡಿಸಿರುವ ಮೂಲ ಉದ್ದೇಶದ ನಿರಾಕರಣೆಯಾಗುವಂತೆ ಮಾಡಿದೆ ಎಂಬುದಾಗಿ ತಿಳಿಸಿತ್ತು.

ಉಳಿಕೆ ಡಿಟಿಸಿಗಳ ವಿದ್ಯುತ್ ಲೆಕ್ಕಪರಿಶೋಧನೆ ನಡೆಸದಿರಲು ವಿದ್ಯುತ್ ಬಳಕೆದಾರರುಗಳ ಗುರುತುಪಟ್ಟಿಯನ್ನು ಹಾಕುವುದು ಪೂರ್ಣಗೊಂಡಿಲ್ಲದಿರುವುದು (ಡಿಟಿಸಿಗಳಲ್ಲಿ ವಿದ್ಯುತ್ ಬಳಕೆದಾರರುಗಳ ಗುರುತುಪಟ್ಟಿಯನ್ನು ಹಾಕುವುದು), ತಂತ್ರಾಂಶ ಅನ್ವಯಗಳ ಸಮನ್ವಯಗೊಳಿಸುವಿಕೆ, ಡಿಟಿಸಿ ಸಂಕೇತಗಳಲ್ಲಿ ತಾಳೆ ಹೊಂದದಿರುವುದು, ಇತ್ಯಾದಿಗಳ ಕಾರಣಗಳನ್ನು ನೀಡಲಾಗಿತ್ತು. ಆರ್–ಎಪಿಡಿಆರ್‌ಪಿ ಅಡಿಯಲ್ಲಿ ಡಿಟಿಸಿಗಳ ಮೀಟರ್ ಅಳವಡಿಕೆಯ ಕಾರ್ಯಗತಗೊಳಿಸುವಿಕೆ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಲೆಕ್ಕಪರಿಶೋಧನೆಯು ಅಂತಹುದೇ ಆದಂತಹ ಕಾರ್ಯಾಚರಣೆಗೊಳಿಸುವಲ್ಲಿನ ಸಮಸ್ಯೆಗಳ[64] ಬಗ್ಗೆ ಅಂಶಗಳನ್ನು ಎತ್ತಿತೋರಿಸಿತು. ಆದಾಗ್ಯೂ, ವಿಸಕಂಗಳು, ಕಾರ್ಯಾಚರಣೆಯ ಸಮಸ್ಯೆಗಳನ್ನು ಬಗೆಹರಿಸದೆಯೇ, ಆರ್‌ಎಪಿಡಿಆರ್‌ಪಿ–ಯೇತರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಡಿಟಿಸಿಗಳಿಗೆ ಮೀಟರ್ ಅಳವಡಿಕೆಗಾಗಿ ಕಾಮಗಾರಿಗಳ ನೀಡಿಕೆಯನ್ನು ಮುಂದುವರೆಸಿತು, ಇದು ಕೂಡ ಮೀಟರ್ ಅಳವಡಿಕೆಯ ಮೂಲ ಉದ್ದೇಶವನ್ನು ವಿಫಲಗೊಳಿಸಿತು.

ಸರ್ಕಾರವು, ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸದಿರುವುದಕ್ಕೆ ಕಾರಣಗಳ ಮೇಲೆ ಲೆಕ್ಕಪರಿಶೋಧನೆಯು ಗಮನಿಸಲಾಗಿದ್ದ ಅಂಶಗಳನ್ನು ಖಚಿತಪಡಿಸುವ ವೇಳೆಯಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂಬುದಾಗಿ ತಿಳಿಸಿತು (ಜೂನ್ 2020).

**3.1.7.2.** ಮುಂದುವರೆದು, ತಂತ್ರಾಂಶ ಅನ್ವಯ ಸಮಗ್ರೀಕರಣ, ಡಿಟಿಸಿ ಸಂಕೇತ ತಾಳೆಹೊಂದದಿರುವುದು, ಮುಂತಾದ ಕಾರ್ಯಾಚರಣೆಯ ಕೆಲವು ಸಮಸ್ಯೆಗಳನ್ನು ಬಗೆಹರಿಸದ ಕಾರಣ, ವಿದ್ಯುತ್ ಲೆಕ್ಕಪರಿಶೋಧನೆಯ ಮೂಲಕ ಪಡೆಯಲಾಗಿರುವ ಮಾಹಿತಿಯು ಯತಾರ್ಥತೆಯಿಂದ ಕೂಡಿರುವುದಿಲ್ಲ. ವಿದ್ಯುತ್ ಲೆಕ್ಕಪರಿಶೋಧನೆಯ ವಿಭಾಗವಾರು ಮತ್ತು ಉಪ–ವಿಭಾಗವಾರು ಫಲಿತಾಂಶಗಳನ್ನು ***ಅನುಬಂಧ–10***ರಲ್ಲಿ ನೀಡಲಾಗಿದೆ. ಫಲಿತಾಂಶಗಳು 'ನಕಾರಾತ್ಮಕ ನಷ್ಟ'ವನ್ನು ಅಥವಾ 'ಶೇಕಡಾ 100ರಷ್ಟು ನಷ್ಟ' ಅಥವಾ ತಪ್ಪು ಎಂದು ತೋರಿಸಿರುವುದನ್ನು ('ಖಾಲಿ' ಅಥವಾ 'ಲಭ್ಯವಿರುವುದಿಲ್ಲ') ಗಮನಿಸಬಹುದು. ಪರೀಕ್ಷಾ ಪರಿಶೀಲನೆ ಮಾಡಲಾದ ಮೂರು ವಿಸಕಂಗಳಲ್ಲಿನ ವಿದ್ಯುತ್ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ;

[63] ಬೆಸ್ಕಾಂ: 37,058 ಡಿಟಿಸಿಗಳ ಪೈಕಿ 22,189 (ಶೇಕಡಾ 60), ಹೆಸ್ಕಾಂ: 43,252 ಡಿಟಿಸಿಗಳ ಪೈಕಿ 26,903 (ಶೇಕಡಾ 62); ಮೆಸ್ಕಾಂ: 31,218ರ ಪೈಕಿ 13,367 (ಶೇಕಡಾ 43).

[64] ಕರ್ನಾಟಕ ಸರ್ಕಾರದ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ 2015–16 ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ 'ಆರ್‌ಎಪಿಡಿಆರ್‌ಪಿ'ಯ ಕಾರ್ಯಗತಗೊಳಿಸುವಿಕೆಯ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು (ಕಂಡಿಕೆ 2.2.18ರಿಂದ 2.2.20) ಗಮನಿಸುವುದು.

**ಕೋಷ್ಟಕ ಸಂಖ್ಯೆ 3.1.2: ವಿದ್ಯುತ್ ಲೆಕ್ಕಪರಿಶೋಧನೆಯ ಫಲಿತಾಂಶಗಳ ವಿವರಗಳು**

| ಕ್ರಮ ಸಂಖ್ಯೆ | ವಿಸಕಂ | ಪರೀಕ್ಷಾ ಪರಿಶೀಲನೆ ಮಾಡಲಾದ ಡಿಟಿಸಿಗಳು (ಸಂಖ್ಯೆಗಳು) | ಶೇಕಡಾ 100ರಷ್ಟು ನಷ್ಟದೊಂದಿಗಿನ ಡಿಟಿಸಿಗಳು | ನಕಾರಾತ್ಮಕ ನಷ್ಟದೊಂದಿಗಿನ ಡಿಟಿಸಿಗಳ ಸಂಖ್ಯೆ | ಮಾಹಿತಿ ಇರದ/ತಪ್ಪು ಎಂದು ತೋರಿಸಿರುವ ಡಿಟಿಸಿಗಳ ಸಂಖ್ಯೆ | ತಪ್ಪುಗಳ ಶೇಕಡಾವಾರು |
|---|---|---|---|---|---|---|
| | (ಎ) | (ಬಿ) | (ಸಿ) | (ಡಿ) | (ಇ) | ಎಫ್ = (ಸಿ+ಡಿ+ಇ)/ ಬಿ*100 |
| 1 | ಬೆಸ್ಕಾಂ | 9,368 | 1,373 | 1,569 | 4,292 | 77 |
| 2 | ಹೆಸ್ಕಾಂ | 6,028 | 2 | 636 | 4,847 | 91 |
| 3 | ಮೆಸ್ಕಾಂ | 9,462 | – | 745 | 3,473 | 45 |

**(ಮೂಲ: ಸಂಬಂಧಿತ ವಿಸಕಂಗಳ ವಿದ್ಯುತ್ ಲೆಕ್ಕಪರಿಶೋಧನಾ ವರದಿ)**

ತಪ್ಪುಗಳಿಂದ ಕೂಡಿದ ಫಲಿತಾಂಶಗಳ ಶೇಕಡಾವಾರು ಶೇಕಡಾ 45ರಿಂದ ಶೇಕಡಾ 91ರ ನಡುವೆ ಇತ್ತು ಎಂಬುದನ್ನು ಗಮನಿಸಬಹುದು. ಆದ್ದರಿಂದ, ಡಿಟಿಸಿಗಳಲ್ಲಿ ಮೀಟರ್ ಅಳವಡಿಕೆಯು ಬೃಹತ್ ಮೊತ್ತದ ಬಂಡವಾಳ ವೆಚ್ಚವನ್ನು ಒಳಗೊಂಡಿರುವುದರಿಂದ, ವಿಸಕಂಗಳು ಆದ್ಯತೆಯ ಮೇರೆಗೆ ಅಡೆತಡೆಗಳನ್ನು ಹೋಗಲಾಡಿಸಿ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳಬೇಕಿತ್ತು.

ಬೆಸ್ಕಾಂ ಕೆಇಆರ್‌ಸಿಗೆ (ದರಪಟ್ಟಿ ಆದೇಶ 2016) ಅನುಪಾಲನಾ ವರದಿಯನ್ನು ಸಲ್ಲಿಸುವ ವೇಳೆಯಲ್ಲಿ ಸಂಬಂಧಿತ ವಿದ್ಯುತ್ ಬಳಕೆದಾರರಿಗೆ ಸಂಬಂಧಿಸಿದಂತೆ ಡಿಟಿಸಿಗಳ ಗುರುತುಪಟ್ಟಿ ಮಾಡುವಿಕೆಯು ಪ್ರಗತಿಯಲ್ಲಿದ್ದು ಹಾಗೂ ಅದು ಜನವರಿ 2016ರ ವೇಳೆಗೆ ಪೂರ್ಣಗೊಳ್ಳಬಹುದು ಹಾಗೂ ತದನಂತರ ತಂತ್ರಾಂಶ ಅನ್ವಯದಿಂದ ಪಡೆಯಲಾದ ವಿದ್ಯುತ್ ಲೆಕ್ಕಪರಿಶೋಧನೆ ವರದಿಗಳನ್ನು ಫೆಬ್ರವರಿ 2016ರಿಂದ ಸಲ್ಲಿಸುವ ಸ್ಥಿತಿಗೆ ಬರುವುದಾಗಿ ತಿಳಿಸಿತು. ತದನಂತರ, ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸಲಾಗುತ್ತಿದೆಯಾದರೂ, ಅಪೂರ್ಣಗೊಂಡಿರುವ ಗುರುತುಪಟ್ಟಿ ಕಾರ್ಯ ಹಾಗೂ ತಂತ್ರಾಂಶ ಅನ್ವಯ ಸಮಗ್ರೀಕರಣ ಸಮಸ್ಯೆಗಳ ಕಾರಣ ಫಲಿತಾಂಶಗಳು ಲೋಪದೋಷಗಳಿಂದ ಕೂಡಿರುತ್ತದೆ ಎಂಬುದಾಗಿ ಬೆಸ್ಕಾಂ ತಿಳಿಸಿತು (ದರಪಟ್ಟಿ ಆದೇಶಗಳು 2017, 2018 ಮತ್ತು 2019). ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಎಲ್ಲಾ ಡಿಟಿಸಿಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸಲು ಕ್ರಮವನ್ನು ಕೈಗೊಳ್ಳುವುದಾಗಿ ಹೆಸ್ಕಾಂ ಮತ್ತು ಮೆಸ್ಕಾಂ ತಿಳಿಸಿದ್ದವು. ಆದಾಗ್ಯೂ, ವಿಸಕಂಗಳು ವಿವಿಧ ಸಮಸ್ಯೆಗಳನ್ನು ಬಗೆಹರಿಸಲಿಲ್ಲ ಹಾಗೂ ಇದು ಡಿಟಿಸಿ ಮೀಟರ್ ಅಳವಡಿಕೆಯ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿದವು ಹಾಗೂ ವಿಸಕಂಗಳು ಯಾತಾರ್ಥತೆಯಿಂದ ಕೂಡಿದ ವಿದ್ಯುತ್ ಲೆಕ್ಕಪರಿಶೋಧನಾ ವರದಿಗಳನ್ನು ಕೆಇಆರ್‌ಸಿಗೆ ಇನ್ನೂ ಸಲ್ಲಿಸಿರುವುದಿಲ್ಲ (ಡಿಸೆಂಬರ್ 2019).

ಬಳಕೆದಾರರುಗಳ ಸ್ಥಾಪಕಗಳನ್ನು ಡಿಟಿಸಿಗಳೊಂದಿಗೆ ಅಸಮರ್ಪಕವಾಗಿ ಗುರುತುಪಟ್ಟಿ ಮಾಡಿರುವುದು, ಡಿಟಿಸಿ ಸಂಕೇತಗಳು ತಾಳೆಯಾಗದಿರುವುದು, ಸುಟ್ಟು ಹೋಗಿರುವ ಮೀಟರ್‌ಗಳು, ಸಂದೇಶ ನೀಡಿಕೆಯಲ್ಲಿನ ತಪ್ಪುಗಳು, ಇತ್ಯಾದಿಗಳ ಕಾರಣದಿಂದ ತಪ್ಪುಗಳಿಂದ ಕೂಡಿದ ಫಲಿತಾಂಶಗಳು ಬರುತ್ತಿದ್ದವು ಎಂಬುದನ್ನು ಸರ್ಕಾರ ಖಚಿತಪಡಿಸಿತು (ಜೂನ್ 2020). ಈ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ ಎಂಬುದಾಗಿಯೂ ತಿಳಿಸಿತು.

**3.1.7.3.** ಅವುಗಳ ಕಾರ್ಯದಕ್ಷತೆಯನ್ನು ನಿರ್ಧಾರಣೆ ಮಾಡುವ ಸಲುವಾಗಿ ಲೆಕ್ಕಪರಿಶೋಧನೆಯು ಪರೀಕ್ಷಾ-ಪರಿಶೀಲನೆ ಆಧಾರದ ಮೇರೆಗೆ ಡಿಟಿಸಿಗಳ ಭೌತಿಕ ಪರಿಶೀಲನೆಯನ್ನು ನಡೆಸಿತು (ಜೂನ್ 2019). ಪರೀಕ್ಷಾ-ಪರಿಶೀಲನೆಯ ಸಮಯದಲ್ಲಿ ಗಮನಿಸಲಾದ ಉಪ-ವಿಭಾಗವಾರು ಅಂಶಗಳನ್ನು ***ಅನುಬಂಧ-11***ರಲ್ಲಿ ನೀಡಲಾಗಿದೆ. ಲೆಕ್ಕಪರಿಶೋಧನೆಯು ಭೌತಿಕ ಪರಿಶೀಲನೆಯ ವೇಳೆಯಲ್ಲಿ ಗಮನಿಸಲಾದ ಅಂಶಗಳು ಹಾಗೂ ಅವುಗಳಿಗೆ ಪ್ರತಿಯಾಗಿ ವಿದ್ಯುತ್ ಲೆಕ್ಕಪರಿಶೋಧನಾ ವರದಿಗಳಿಂದ ಮತ್ತು ಪಾವತಿಗಾಗಿನ ತಗಾದೆ, ಸಂಗ್ರಹಣೆ/ವಸೂಲಾತಿ ಮತ್ತು ಬಾಕಿ (ಡಿಸಿಬಿ) ವರದಿಗಳಿಂದ ಪಡೆದುಕೊಳ್ಳಲಾದ ಮಾಹಿತಿಗಳನ್ನು ಮಾಡಲಾದ ಪರಿಶೀಲನೆಯ ವೇಳೆಯಲ್ಲಿ ಗಮನಿಸಲಾದ ಅಂಶಗಳನ್ನು ಈ ಕೆಳಗಿನ ಕೋಷ್ಟಕವು ತಿಳಿಸುತ್ತದೆ.

**ಕೋಷ್ಟಕ ಸಂಖ್ಯೆ 3.1.3: ಡಿಟಿಸಿಗಳು, ವಿದ್ಯುತ್ ಲೆಕ್ಕಪರಿಶೋಧನಾ ವರದಿಗಳು ಮತ್ತು ಡಿಸಿಬಿಗಳ ಭೌತಿಕ ಪರಿಶೀಲನೆಯ ಫಲಿತಾಂಶಗಳು**

| ಕ್ರಮ ಸಂಖ್ಯೆ | ವಿಸಕಂ | ಉತ್ತಮ | ಬಳಕೆದಾರರ ಗುರುತುಪಟ್ಟಿ ಹಾಕದಿರುವುದು | ಮೀಟರ್ ಸುಟ್ಟು ಹೋಗಿರುವುದು | ಮೀಟರ್ ಮಾಪಕಗಳು ದಾಖಲಿಸುತ್ತಿರ ದಿರುವುದು/ ಪ್ರದರ್ಶಕವು ಕಾರ್ಯನಿರ್ವಹಿಸು ತ್ತಿರದಿರುವುದು | ಡಿಟಿಸಿಗಳ ಸ್ಥಳ/ಕ್ರಮ ಸಂಖ್ಯೆಯು ತಾಳೆ ಹೊಂದದಿರುವುದು | ಇತರೆ ಸಮಸ್ಯೆಗಳು[65] | ಒಟ್ಟು |
|---|---|---|---|---|---|---|---|---|
| 1 | ಬೆಂಸ್ಕಾಂ | 4 | 8 | 4 | 3 | – | 12 | 31 |
| 2 | ಹೆಸ್ಕಾಂ | – | 4 | 11 | 50 | 21 | 12 | 98 |
| 3 | ಮೆಸ್ಕಾಂ | – | 4 | 2 | 7 | 4 | 17 | 32 |

**(ಮೂಲ: ಭೌತಿಕ ಪರಿಶೀಲನೆ, ವಿದ್ಯುತ್ ಲೆಕ್ಕಪರಿಶೋಧನೆ ವರದಿಗಳು ಮತ್ತು ಡಿಸಿಬಿ ವರದಿಗಳು)**

ಮೂರು ವಿಸಕಂಗಳಲ್ಲಿ ಭೌತಿಕವಾಗಿ ಪರಿಶೀಲಿಸಲಾದಂತಹ 161 ಡಿಟಿಸಿ ಮೀಟರ್‌ಗಳ ಪೈಕಿ ಕೇವಲ ನಾಲ್ಕು ಡಿಟಿಸಿ ಮೀಟರ್‌ಗಳು ಮಾತ್ರ ಉತ್ತಮ ಸ್ಥಿತಿಯಲ್ಲಿದ್ದವು ಹಾಗೂ ಉಳಿಕೆ ಮೀಟರ್‌ಗಳು ಸುಟ್ಟು ಹೋಗಿದ್ದವು ಅಥವಾ ಕಾರ್ಯನಿರ್ವಹಿಸುತ್ತಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿದ್ಯುತ್ ಲೆಕ್ಕಪರಿಶೋಧನಾ ವರದಿಗಳಲ್ಲಿನ ಡಿಟಿಸಿಗಳ ಸ್ಥಳ ಸಂಕೇತಗಳಲ್ಲಿ ತಾಳೆ ಹೊಂದುತ್ತಿರದ ಪ್ರಕರಣಗಳೂ ಸಹ ಇದ್ದವು, ಡಿಟಿಸಿ ಪ್ರಕಾರ ಬಳಕೆದಾರರುಗಳ ಸಂಖ್ಯೆಗಳಲ್ಲಿ ಹಾಗೂ ಬಿಲ್ಲುಗಳನ್ನು ಹೊರತೆಗೆಯುವ ತಂತ್ರಾಂಶ ಅನ್ವಯದಲ್ಲಿ (ಡಿಸಿಬಿ – ತಗಾದೆ, ವಸೂಲಾತಿ/ಸಂಗ್ರಹಣೆ ಮತ್ತು ಬಾಕಿಗಳ ವರದಿ ಎಂಬುದಾಗಿ ಕರೆಯಲ್ಪಡುವ) ದಾಖಲಾಗಿದ್ದ ಸಂಖ್ಯೆಗಳ ನಡುವೆ ವ್ಯತ್ಯಾಸಗಳಿದ್ದವು, ಈ ವ್ಯತ್ಯಾಸಗಳು ವಿದ್ಯುತ್ ಲೆಕ್ಕಪರಿಶೋಧನಾ ಫಲಿತಾಂಶಗಳಲ್ಲಿ ತಪ್ಪುಗಳಿಗೆ ಕಾರಣವಾಗಿದ್ದವು. ಮುಂದುವರೆದು, ವಿದ್ಯುತ್ ಲೆಕ್ಕಪರಿಶೋಧನಾ ವರದಿಗಳಲ್ಲಿ ದಾಖಲಾಗಿದ್ದಂತೆ ವಿದ್ಯುತ್ ಬಳಕೆದಾರರುಗಳ ಸಂಖ್ಯೆ ಹಾಗೂ ಡಿಸಿಬಿ ವರದಿಯಲ್ಲಿನ ವ್ಯತ್ಯಾಸಗಳು ಹೆಸ್ಕಾಂನಲ್ಲಿ 1 ರಿಂದ 306ರವರೆಗೆ ಹಾಗೂ ಮೆಸ್ಕಾಂನಲ್ಲಿ 1 ರಿಂದ 326ರವರೆಗೆ ಆಗಿತ್ತು (***ಅನುಬಂಧ–12***ನ್ನು ಗಮನಿಸುವುದು).

ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಕೆಗಾಗಿ ಗುತ್ತಿಗೆಗಳು ಕಾರ್ಯೋದ್ಯುಕ್ತಗೊಳಿಸಿದ ದಿನಾಂಕದಿಂದ ಐದು ವರ್ಷಗಳವರೆಗೆ ನಿರ್ವಹಣೆಯನ್ನು ಒಳಗೊಂಡಿತ್ತು. ಆದಾಗ್ಯೂ, ನಿರ್ವಹಣಾ ಗುತ್ತಿಗೆಯನ್ನು ವಿದ್ಯುತ್ ಲೆಕ್ಕಪರಿಶೋಧನೆ ಉದ್ದೇಶಗಳಿಗಾಗಿ ಸಂಬಂಧಿತ ಉಪ–ವಿಭಾಗಗಳ ಬಳಕೆಗಾಗಿ ಡಿಟಿಸಿ ಮೀಟರ್‌ಗಳಿಂದ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಂಡು ಅದನ್ನು ವಿಶ್ಲೇಷಿಸುವ ಸಲುವಾಗಿ ಸೀಮಿತಗೊಳಿಸಲಾಗಿತ್ತು. ನಿರ್ವಹಣಾ ಗುತ್ತಿಗೆಯು ಸುಟ್ಟು ಹೋಗಿರುವ ಮೀಟರ್‌ಗಳನ್ನು ಬದಲಾಯಿಸುವುದು, ಕಾರ್ಯನಿರ್ವಹಿಸುತ್ತಿಲ್ಲದ ಮೀಟರ್‌ಗಳನ್ನು ಸರಿಪಡಿಸುವುದು, ಸಂಕೇತಗಳಲ್ಲಿ ತಾಳೆಹೊಂದದಿರುವುದು, ಇತ್ಯಾದಿಗಳಿಗಾಗಿ ಪರಿಹಾರಕ ಕ್ರಮಗಳನ್ನು ಹೊಂದಿಲ್ಲದಿರುವಷ್ಟರ ಮಟ್ಟಿಗೆ ಕೊರತೆಯಿಂದ ಕೂಡಿತ್ತು. ತತ್ಪರಿಣಾಮವಾಗಿ, ವಿಸಕಂಗಳು ಡಿಟಿಸಿ ಮೀಟರ್‌ಗಳಲ್ಲಿ ದಾಖಲಾಗಿರುವಂತೆ ಹಾಗೂ ವಿದ್ಯುತ್ ಬಳಕೆಯನ್ನು ಕೈಯಿಂದ ಸಂಗ್ರಹಿಸುವುದಕ್ಕೆ ಮೊರೆಹೋಗುವಂತಾಗಿತ್ತು ಹಾಗೂ ವಿದ್ಯುತ್ ಲೆಕ್ಕಪರಿಶೋಧನೆ ನಡೆಸುವ ಸಲುವಾಗಿ ಉಪ–ವಿಭಾಗಗಳಲ್ಲಿ ನಿರ್ವಹಿಸಿದ್ದ ಬಿಲ್ಲುಗಳನ್ನು ಹೊರತೆಗೆಯುವ ತಂತ್ರಾಂಶ ಅನ್ವಯದ ಅನುಸಾರ ವಿದ್ಯುತ್ ಬಳಕೆಯ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿತ್ತು. ಇದು, ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವ ಮೂಲ ಉದ್ದೇಶವನ್ನು ವಿಫಲಗೊಳಿಸಿತು.

ಈ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಜೂನ್ 2020).

[65] ಸ್ಥಳದಲ್ಲಿ ಮೀಟರ್ ಕಂಡುಬರದಿದ್ದುದು, ವಾಸ್ತವಿಕ ಬಳಕೆಯು ವಿದ್ಯುತ್ ಲೆಕ್ಕಪರಿಶೋಧನಾ ವರದಿಯಲ್ಲಿ ದಾಖಲಾಗಿದ್ದುದಕ್ಕಿಂತ ಕಡಿಮೆ ಇದ್ದುದು, ಬ್ಯಾಟರಿ ಒಣಗಿ ಹೋಗಿದ್ದುದು, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

### *ವಿತರಣಾ ನಷ್ಟವನ್ನು ನಿರ್ದಿಷ್ಟ ಕನಿಷ್ಠ ಮಟ್ಟಕ್ಕೆ ಸಾಧಿಸದಿರುವುದರ ಪ್ರಭಾವ*

**3.1.8.** ವಿದ್ಯುತ್ತಿನ ಒಳಹರಿವು ಮತ್ತು ವಿದ್ಯುತ್ತಿನ ಮಾರಾಟ, ಇವೆರಡರ ವ್ಯತ್ಯಾಸವೇ ವಿದ್ಯುತ್ತಿನ ವಿತರಣಾ ನಷ್ಟ. ವಿತರಣಾ ಸಂಪರ್ಕಜಾಲವನ್ನು ಉತ್ತಮಗೊಳಿಸುವಿಕೆಗಾಗಿ ಮಾಡಲಾದ ಹೂಡಿಕೆಯು ಸಾಮಾನ್ಯವಾಗಿ ವಿತರಣಾ ನಷ್ಟಗಳು ತಗ್ಗುವಲ್ಲಿಗೆ ಪರಿವರ್ತಿತಗೊಳ್ಳಬೇಕು. ಈ ಹಿಂದಿನ ಸಾಲುಗಳಲ್ಲಿ ವಿಸಕಂಗಳು ವಿತರಣಾ ನಷ್ಟಗಳನ್ನು ತಗ್ಗಿಸುವಲ್ಲಿ ಮಾಡಲಾದ ಸಾಧನೆ ಹಾಗೂ ಪ್ರಸಕ್ತ ಸಾಲಿನ ನಷ್ಟದ ಮಟ್ಟಗಳನ್ನು ಗಮನಿಸಿ ಹಾಗೂ ಅಲ್ಲದೆಯೇ ಈ ವರೆಗೆ ಭರಿಸಲಾಗಿರುವ ಬಂಡವಾಳ ವೆಚ್ಚಗಳು ಮತ್ತು ಪ್ರಸಕ್ತ ಸಾಲಿಗೆ ಪ್ರಸ್ತಾಪಿಸಲಾಗಿದ್ದ ಬಂಡವಾಳ ವೆಚ್ಚಗಳನ್ನು ಪರಿಗಣಿಸಿ, ವಿದ್ಯುತ್ ದರಪಟ್ಟಿಗಳಿಗೆ ಅನುಮೋದನೆ ನೀಡುವ ವೇಳೆಯಲ್ಲಿ ಕೆಇಆರ್‌ಸಿ ವಿತರಣಾ ನಷ್ಟಗಳಿಗೆ ಗುರಿಗಳನ್ನು ನಿಗದಿಗೊಳಿಸಿತ್ತು. ಗುರಿಯನ್ನು ಸಾಧಿಸಿದ್ದಕ್ಕಾಗಿ ಕೆಇಆರ್‌ಸಿ ಪ್ರೋತ್ಸಾಹಧನವನ್ನು ಹಾಗೂ ಈ ನಿಟ್ಟಿನಲ್ಲಿನ ಕೊರತೆಗೆ ದಂಡ ವಿಧಿಸುವುದನ್ನು ಅನುವು ಮಾಡಿತ್ತು.

2016ರಿಂದ 2019ರ ಸಾಲುಗಳಲ್ಲಿ ಮೂರು ವಿಸಕಂಗಳಲ್ಲಿನ ವಿದ್ಯುತ್ ವಿತರಣಾ ನಷ್ಟಗಳ ಗುರಿಗಳು ಮತ್ತು ಅವುಗಳಿಗೆ ಪರಸ್ಪರ ಅಭಿಮುಖವಾಗಿ ವಿತರಣಾ ನಷ್ಟಗಳನ್ನು ತಗ್ಗಿಸುವಲ್ಲಿನ ಸಾಧನೆಗಳು ಹಾಗೂ ದಂಡವನ್ನು ವಿಧಿಸಿರುವಿಕೆಯ ವಿವರಗಳು ಈ ಕೆಳಗೆ ತಿಳಿಸಿರುವಂತೆ ಆಗಿವೆ:

**ಕೋಷ್ಟಕ ಸಂಖ್ಯೆ 3.1.4: ವಿದ್ಯುತ್ ವಿತರಣಾ ನಷ್ಟವನ್ನು ತಗ್ಗಿಸುವಲ್ಲಿನ ಗುರಿಯನ್ನು ಸಾಧಿಸದಿರುವುದಕ್ಕೆ ದಂಡ ವಿಧಿಸಿರುವುದು**

| ಕ್ರಮ ಸಂಖ್ಯೆ | ವಿದ್ಯುತ್ ದರಪಟ್ಟಿ ಆದೇಶ | ಕೆಇಆರ್‌ಸಿ ನಿಗದಿಗೊಳಿಸಿದ್ದ ಗುರಿಗಳು (ಶೇಕಡಾವಾರು) | ಸಾಧಿಸಲಾಗಿದ್ದ ನಷ್ಟದ ಮಟ್ಟಗಳು (ಶೇಕಡಾವಾರು) | ವಿಧಿಸಲಾಗಿದ್ದ ದಂಡ (₹ ಕೋಟಿಯಲ್ಲಿ) [66] |
|---|---|---|---|---|
| **ಬೆಸ್ಕಾಂ** | | | | |
| 1 | 2016 | 13.80 | 14.78 | 116.57 |
| 2 | 2019 | 13.00 | 13.17 | 28.75 |
| **ಹೆಸ್ಕಾಂ** | | | | |
| 3 | 2017 | 18.00 | 20.92 | 164.35 |
| **ಮೆಸ್ಕಾಂ** | | | | |
| 4 | 2018 | 11.35 | 11.40 | 1.48 |
| 5 | 2019 | 11.25 | 13.50 | 63.83 |
| **ಒಟ್ಟು** | | | | **374.98** |

**(ಮೂಲ: ಕೆಇಆರ್‌ಸಿ ನೀಡಿದ್ದ ವಿದ್ಯುತ್ ದರಪಟ್ಟಿ ಆದೇಶಗಳು)**

2016ರಿಂದ 2019ರ ಅವಧಿಯಲ್ಲಿ ವಿಸಕಂಗಳು ಗುರಿಯಾಗಿಸಿಕೊಳ್ಳಲಾಗಿದ್ದಂತಹ ವಿದ್ಯುತ್ ವಿತರಣಾ ನಷ್ಟಗಳನ್ನು ಸಾಧಿಸದಿದ್ದ ಕಾರಣಕ್ಕಾಗಿ ₹ 374.98 ಕೋಟಿ ಮೊತ್ತದಷ್ಟು ದಂಡವನ್ನು ಪಾವತಿಸಬೇಕಾಯಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿಸಕಂಗಳು ವಿದ್ಯುತ್ ನಷ್ಟಗಳ ಮೂಲಗಳನ್ನು ಸರಿಯಾದ ರೀತಿಯಲ್ಲಿ ನಿರ್ಧಾರಣೆ ಮಾಡಿದ್ದಲ್ಲಿ ದೋಷ ಪರಿಹಾರಕ ಕ್ರಮಗಳನ್ನು ಕೈಗೊಳ್ಳಬಹುದಾಗಿತ್ತು. ವಿಸಕಂಗಳು ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವಿಕೆಯ ಕಾರ್ಯಗತಗೊಳಿಸುವಲ್ಲಿ ವಿಳಂಬ ಮಾಡಿದ್ದವಾದ್ದರಿಂದ ಹಾಗೂ ವಿದ್ಯುತ್ ಲೆಕ್ಕಪರಿಶೋಧನೆ ನಡೆಸುವಲ್ಲಿನ ಅಡಚಣೆಗಳನ್ನು ಪರಿಹರಿಸುವಲ್ಲಿ ವಿಫಲಗೊಂಡಿದ್ದವಾದ್ದರಿಂದ ದಂಡವನ್ನು ಪಾವತಿಸುವುದು ಅನಿವಾರ್ಯವಾಯಿತು. ಈ ವೆಚ್ಚಗಳನ್ನು ವಿದ್ಯುತ್ ದರಪಟ್ಟಿಗೆ ಒಂದು ಅಂಶವನ್ನಾಗಿಸಲು ಅವಕಾಶ ಮಾಡಿಕೊಟ್ಟಿರುವುದಿಲ್ಲವಾದ್ದರಿಂದ ವಿಸಕಂಗಳು ಈ ವೆಚ್ಚಗಳನ್ನು ತಮ್ಮೊಳಗೆ ಹಾಕಿಕೊಳ್ಳಬೇಕಾಗುತ್ತದೆ/ತಾವೇ ಸ್ವತಃ ಭರಿಸಬೇಕಾಗುತ್ತದೆ.

2008 ಮತ್ತು 2019ರ ನಡುವಿನಲ್ಲಿ ಪ್ರತೀ ವರ್ಷವೂ ವಿದ್ಯುತ್ ದರಪಟ್ಟಿ ಆದೇಶಗಳಿಗೆ ಅನುಮೋದನೆ ನೀಡುವ ವೇಳೆಯಲ್ಲಿ ಕೆಇಆರ್‌ಸಿ ವಿಸಕಂಗಳಿಗೆ ನಿರ್ದೇಶನಗಳನ್ನು ನೀಡುತ್ತಿತ್ತು ಹಾಗೂ ಪ್ರತಿಯೊಂದು ವಿಸಕಂಯು ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವಲ್ಲಿ ಸಾಧಿಸಿರುವ ಪ್ರಗತಿಯನ್ನು ಅನುಸರಿಸುತ್ತಿತ್ತು. ಕೆಇಆರ್‌ಸಿ ನೀಡಿದ್ದ ನಿರ್ದೇಶನಗಳ ವರ್ಷವಾರು ಸಂಕ್ಷಿಪ್ತ ಸಾರಾಂಶಗಳನ್ನು ***ಅನುಬಂಧ-13***ರಲ್ಲಿ ನೀಡಲಾಗಿದೆ. ನಿರ್ದೇಶನಗಳನ್ನು ಪಾಲಿಸದೇ ವಿಸಕಂಗಳು ಸಮಸ್ಯೆಗಳನ್ನು ಬಗೆಹರಿಸದೆಯೇ ಕಳೆದ ಹಲವಾರು ವರ್ಷಗಳಿಂದಲೂ ಪ್ರತೀ ವರ್ಷವೂ ಅದೇ ಭರವಸೆಗಳನ್ನು

---

[66] ಇತರೆ ವರ್ಷಗಳಲ್ಲಿನ (ಕೋಷ್ಟಕದಲ್ಲಿ ತಿಳಿಸಲಾಗಿರುವುದನ್ನು ಹೊರತುಪಡಿಸಿದಂತೆ) ವಾಸ್ತವಿಕ ವಿದ್ಯುತ್ ವಿತರಣಾ ನಷ್ಟಗಳು ಕೆಇಆರ್‌ಸಿ ನಿಗದಿಗೊಳಿಸಿದ್ದ ಗುರಿಗಳ ಒಳಗೇ ಇದ್ದವು.

ನೀಡುತ್ತಲೇ ಬಂದಿರುವುದಕ್ಕೆ ಕೆಇಆರ್‌ಸಿ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತು. (ದರಪಟ್ಟಿ ಆದೇಶಗಳು 2017 ಮತ್ತು 2018).

ತಪ್ಪುಗಳಿಂದ ಕೂಡಿರುವ ಮೀಟರ್‌ಗಳನ್ನು ಬದಲಾಯಿಸುವುದು, ವಿದ್ಯುತ್ ಬಳಕೆದಾರರ ಗುರುತುಪಟ್ಟಿಯನ್ನು ಪರಿಷ್ಕರಣೆ ಮಾಡುವುದು, ಡಿಟಿಸಿ ಸಂಕೇತಗಳನ್ನು ಬಿಲ್ಲುಗಳನ್ನು ಹೊರತೆಗೆಯುವ ತಂತ್ರಾಂಶ ಅನ್ವಯದೊಂದಿಗೆ ಏಕಕಾಲಿಕಗೊಳಿಸುವುದು, ಇತ್ಯಾದಿಗಳಿಗಾಗಿ ಕ್ರಮಗಳನ್ನು ಕೈಗೊಳ್ಳಲಾಗಿರುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಜೂನ್ 2020). ರೀ–ಕಂಡಕ್ಟರ್ ಮಾಡುವ ಮೂಲಕ ಮತ್ತು ನಿರ್ವಹಣಾ ಕಾಮಗಾರಿಗಳನ್ನು ನಿಯತವಾಗಿ ಮಾಡುವ ಮೂಲಕ ವಿದ್ಯುತ್ ವಿತರಣಾ ನಷ್ಟಗಳನ್ನು ತಗ್ಗಿಸುವ ಸಲುವಾಗಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂಬುದಾಗಿಯೂ ತಿಳಿಸಿತು.

## ನಿರ್ಣಯ ಮತ್ತು ಶಿಫಾರಸುಗಳು

ಮಾರ್ಚ್ 2019ರಲ್ಲಿದ್ದಂತೆ ಡಿಟಿಸಿ ಮೀಟರ್‌ಗಳ ಅಳವಡಿಕೆಗಾಗಿ ವಿಸಕಂಗಳು ₹ 449.81 ಕೋಟಿ ಮೊತ್ತದಷ್ಟು ಬೃಹತ್ ಬಂಡವಾಳ ವೆಚ್ಚವನ್ನು ಹಾಗೂ ಪಡೆಯಲಾಗಿದ್ದ ಸಾಲಗಳ ಮೇಲೆ ₹ 133.63 ಕೋಟಿ ಮೊತ್ತದಷ್ಟು ಬಡ್ಡಿ ವೆಚ್ಚವನ್ನು ಭರಿಸಿದ್ದವು. ಅಲ್ಲದೆಯೇ, ಬಾಕಿಯಿದ್ದಂತಹ ಸಾಲಗಳ ಮೇಲೆ ₹ 40.43 ಕೋಟಿ ಮೊತ್ತದಷ್ಟು ವಾರ್ಷಿಕ ಬಡ್ಡಿ ವೆಚ್ಚಗಳನ್ನು ವಿಸಕಂಗಳು ಅವಿರತವಾಗಿ ಭರಿಸಬೇಕಾಗಿತ್ತು. ಆದಾಗ್ಯೂ, ವಿದ್ಯುತ್ ಬಳಕೆದಾರರ ಗುರುತುಪಟ್ಟಿಯನ್ನು ಡಿಟಿಸಿಗಳಿಗೆ ಸಂಪರ್ಕಿಸುವ ಕಾರ್ಯ ಅಪೂರ್ಣಗೊಂಡಿದ್ದು, ನಿಕೃಷ್ಟಮಟ್ಟದ ಜಾಲತಾಣ ಸಂಪರ್ಕ, ತಂತ್ರಾಂಶ ಅನ್ವಯಗಳ ಸಮಗ್ರೀಕರಣವು ಅಪೂರ್ಣಗೊಂಡಿರುವುದರ ಕಾರಣ ಡಿಟಿಸಿ ಮೀಟರ್‌ಗಳು ಸಂದೇಶಗಳನ್ನು ನೀಡದಿದ್ದುದರ ಕಾರಣ ಡಿಟಿಸಿ ಮಟ್ಟದಲ್ಲಿ ಯತಾರ್ಥತೆಯಿಂದ ಕೂಡಿದ ನಷ್ಟಗಳನ್ನು ಅಳೆಯುವುದು ವಿಸಕಂಗಳಿಗೆ ಸಾಧ್ಯವಾಗಿರದಿದ್ದುದು, ಈ ಕಾರಣಗಳಿಂದಾಗಿ, ಡಿಟಿಸಿಗಳಿಗೆ ಮೀಟರ್ ಅಳವಡಿಸುವುದರ ಮೇಲೆ ವಿಸಕಂಗಳು ಭರಿಸಿದ್ದಂತಹ ಒಂದು ಗಮನಾರ್ಹವಾದಂತಹ ಬಂಡವಾಳ ವೆಚ್ಚಗಳು ನಿಷ್ಫಲವಾಗಿ ಉಳಿದಿದ್ದವು. ಅಲ್ಲದೆಯೇ, ವಿದ್ಯುತ್ ನಷ್ಟಗಳನ್ನು ತಗ್ಗಿಸುವಿಕೆಗಾಗಿ ನಿಗದಿಪಡಿಸಲಾಗಿದ್ದ ಗುರಿಗಳನ್ನು ಸಾಧಿಸದಿದ್ದುದಕ್ಕಾಗಿ ವಿಸಕಂಗಳು ₹ 374.98 ಕೋಟಿ ಮೊತ್ತದಷ್ಟು ದಂಡವನ್ನು ಪಾವತಿಸುವಂತಾಯಿತು, ವಿಸಕಂಗಳು ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವುದನ್ನು ಕಾರ್ಯಗತಗೊಳಿಸುವಲ್ಲಿನ ಅಡಚಣೆಗಳನ್ನು ಬಗೆಹರಿಸುವ ಸಲುವಾಗಿ ಕ್ರಮಗಳನ್ನು ಕೈಗೊಂಡಿದ್ದಲ್ಲಿ ಇದನ್ನು ತಪ್ಪಿಸಿಕೊಳ್ಳಬಹುದಾಗಿತ್ತು. ಮುಂದುವರೆದು, ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವುದರ ಮೇಲೆ ವಿಸಕಂಗಳು ಭರಿಸಿದ್ದ ಬಂಡವಾಳ ವೆಚ್ಚಗಳು ವಿದ್ಯುತ್ ದರಪಟ್ಟಿ ನಿಗದಿಗೊಳಿಸುವುದರಲ್ಲಿ ಒಂದು ಅಂಶವಾಗಿರುತ್ತದೆ ಮತ್ತು ವಿದ್ಯುತ್ ಬಳಕೆದಾರರುಗಳಿಗೆ ಯಾವುದೇ ಪ್ರಮಾಣಾನುಗುಣವಾದಂತಹ ಪ್ರಯೋಜನಗಳನ್ನು ನೀಡದೆಯೇ ಅವರುಗಳು ಹೆಚ್ಚಳಗೊಳಿಸಲ್ಪಟ್ಟ ವಿದ್ಯುತ್ ದರಗಳನ್ನು ಪಾವತಿಸುವಂತೆ ಮಾಡುತ್ತದೆ.

**ಸಂಖ್ಯೆಗಳಲ್ಲಿ ಹೆಚ್ಚಳಗೊಳಿಸಲ್ಪಟ್ಟಿರುವ ಡಿಟಿಸಿಗಳಿಗೆ ಅವಿರತ ಆಧಾರದ ಮೇರೆಗೆ ಮೀಟರ್‌ಗಳನ್ನು ಅಳವಡಿಸುವುದನ್ನು ಖಚಿತಪಡಿಸಿಕೊಳ್ಳುವುದು, ಪ್ರತಿಯೊಂದು ಡಿಟಿಸಿ ಅಡಿಯಲ್ಲಿನ ಬಳಕೆದಾರರುಗಳನ್ನು ಗುರುತಿಸುವುದು ಮತ್ತು ಗುರುತುಪಟ್ಟಿಯನ್ನು ಹಾಕುವುದು, ಸಂಪರ್ಕ ಜಾಲ ಸಮಸ್ಯೆಗಳನ್ನು ಬಗೆಹರಿಸುವುದು (ಬ್ಯಾಂಡ್‌ವಿಡ್ತ್‌ಗಳನ್ನು ಹೆಚ್ಚಳಗೊಳಿಸುವುದು, ಮುಂತಾದವುಗಳ ಮೂಲಕ), ಡಿಟಿಸಿ ಸ್ಥಳ ಸಂಕೇತವು ವಿದ್ಯುತ್ ಬಿಲ್ಲುಗಳನ್ನು ಹೊರತೆಗೆಯುವ ತಂತ್ರಾಂಶ ಅನ್ವಯದೊಂದಿಗೆ ತಾಳೆಹೊಂದದಿರುವುದನ್ನು ಸರಿಪಡಿಸುವುದು ಹಾಗೂ ಕಾರ್ಯಸ್ಥಗಿತಗೊಂಡಿರುವ ಮೀಟರ್‌ಗಳನ್ನು ಸಮಯೋಚಿತವಾಗಿ ಬದಲಾಯಿಸುವುದು/ಸರಿಪಡಿಸುವುದರ ಮೂಲಕ ಡಿಟಿಸಿಗಳಿಗೆ ಮೀಟರ್‌ಗಳನ್ನು ಅಳವಡಿಸುವುದರ ಮೇಲಿನ ಹೂಡಿಕೆಯು ಫಲಪ್ರದವಾಗುವ ಸಲುವಾಗಿ, ವಿಸಕಂಗಳು ರಚನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯತೆಯಿರುತ್ತದೆ.**

ಡಿಟಿಸಿವಾರು ವಿದ್ಯುತ್ ಲೆಕ್ಕಪರಿಶೋಧನೆ ನಡೆಸುವಲ್ಲಿನ ಅಡಚಣೆಗಳನ್ನು ಬಗೆಹರಿಸುವ ಸಲುವಾಗಿ ಹಾಗೂ ವಿದ್ಯುತ್ ವಿತರಣಾ ನಷ್ಟಗಳನ್ನು ತಗ್ಗಿಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದಾಗಿ ಸರ್ಕಾರವು ತಿಳಿಸಿತು (ಜೂನ್ 2020).

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

### *3.2. ಕೆಟ್ಟುಹೋಗಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ*

***ಕಂಪನಿಯು ಕೆಟ್ಟುಹೋಗಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗಾಗಿ ತನ್ನದೇ ಆದಂತಹ ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳನ್ನು ಅನುಸರಿಸುವಲ್ಲಿ ವಿಫಲಗೊಂಡಿತು. ₹ 41.55 ಕೋಟಿ ಮೌಲ್ಯದ 55 ಟ್ರಾನ್ಸ್‌ಫರ್ಮರ್‌ಗಳನ್ನು (ಲೆಕ್ಕಪರಿಶೋಧನೆಯಲ್ಲಿ ಆಯ್ಕೆ ಮಾಡಿಕೊಂಡವುಗಳ ಪೈಕಿ ಶೇಕಡಾ 64) ದುರಸ್ತಿಗೆ ಅವಕಾಶ ನೀಡಲಾಗಿದ್ದಂತಹ 360 ದಿನಗಳನ್ನು ಮೀರಿದಂತೆ ಒಂದು ತಿಂಗಳಿನಿಂದ ಏಳೂವರೆ ವರ್ಷಗಳವರೆಗೆ ದುರಸ್ತಿ ಮಾಡದೆಯೇ ಬಿಡಲಾಗಿತ್ತು. ಈ ಟ್ರಾನ್ಸ್‌ಫಾರ್ಮರ್‌ಗಳನ್ನು ವಿದ್ಯುತ್ ಪ್ರಸರಣ ವ್ಯವಸ್ಥೆಯಲ್ಲಿ ಬಳಸಲು ಸಾಧ್ಯವಾಗಿರದಿದ್ದ ಕಾರಣ ₹ 75.90 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚದೊಂದಿಗೆ ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ತಪ್ಪಿಸಬಹುದಾಗಿದ್ದ ಖರೀದಿಗಳನ್ನು ಮಾಡುವಲ್ಲಿಗೆ ದಾರಿ ಮಾಡಿಕೊಟ್ಟಿತು.***



**ಛಾಯಾಚಿತ್ರ ಸಂಖ್ಯೆ 3.2.1:** ವಿದ್ಯುತ್ ಟ್ರಾನ್ಸ್‌ಫಾರ್ಮರ್

**3.2.1.** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು[67] (ಕೆಪಿಟಿಸಿಎಲ್) ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪರಿಚ್ಛೇದ 14ರ ಅಡಿಯಲ್ಲಿ ವಿದ್ಯುತ್ ಪ್ರಸರಣಕ್ಕಾಗಿ ಪರವಾನಿಗೆ ಹೊಂದಿರುವ ಒಂದು ಕಂಪನಿಯಾಗಿದೆ ಹಾಗೂ ತನ್ನ ವಿದ್ಯುತ್ ಪ್ರಸರಣ ಜಾಲಮಾರ್ಗದಲ್ಲಿ ವಿವಿಧ ಸಾಮರ್ಥ್ಯಗಳ[68] ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು (ಪಿಟಿ) ಕಾರ್ಯಾಚರಣೆಗೊಳಿಸುತ್ತದೆ ಮತ್ತು ನಿರ್ವಹಿಸಿಕೊಂಡು ಹೋಗುತ್ತದೆ. ವಿದ್ಯುತ್ ಟ್ರಾನ್ಸ್‌ಫಾರ್ಮರ್, ವಿದ್ಯುತ್ ಓಲ್ಟೇಜ್‌ಗಳನ್ನು ಹೆಚ್ಚಳಗೊಳಿಸುವ ಮತ್ತು ತಗ್ಗಿಸುವ ಸಲುವಾಗಿ ವಿದ್ಯುತ್ ಪ್ರಸರಣ ಮತ್ತು ವಿತರಣಾ ಸಂಪರ್ಕಜಾಲದಲ್ಲಿ ಬಳಸಲಾಗುವ ಒಂದು ವಿದ್ಯುತ್ ಸಾಧನವಾಗಿರುತ್ತದೆ. ವಿದ್ಯುತ್ ಟ್ರಾನ್ಸ್‌ಫಾರ್ಮರಿನ ಯಾವುದೇ ವಿಫಲತೆಯು ವಿದ್ಯುತ್ ಪ್ರಸರಣ ವ್ಯವಸ್ಥೆಗೆ ಅಡಚಣೆಯನ್ನುಂಟು ಮಾಡುತ್ತದೆ ಹಾಗೂ ವಿದ್ಯುತ್ ಪ್ರಸರಣ ಸಂಪರ್ಕಜಾಲವನ್ನು ಅಪಾಯಕ್ಕೆ ಸಿಲುಕಿಸುತ್ತದೆ. ಒಂದು ವಿದ್ಯುತ್ ಪ್ರಸರಣಾ ವ್ಯವಸ್ಥೆಯಲ್ಲಿನ ದಕ್ಷತೆಯನ್ನು ಸಾಧಿಸುವ ಸಲುವಾಗಿ, ಅಗತ್ಯ ಸಾಮರ್ಥ್ಯದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸುವುದು ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗುವುದು ಅತ್ಯಗತ್ಯವಾಗಿರುತ್ತದೆ.

**3.2.1.1.** ಕಂಪನಿಯು ಕೆಟ್ಟುಹೋಗಿರುವ/ಲೋಪದೋಷಗಳಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಗುರುತಿಸುವ ಮತ್ತು ದುರಸ್ತಿ ಮಾಡುವ ಪ್ರಕ್ರಿಯೆಗಾಗಿ ವೇಳಾ ಪಟ್ಟಿಯನ್ನು ನಿರ್ದಿಷ್ಟಗೊಳಿಸಿತು (ಜುಲೈ 2009). ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯನ್ನು ಸ್ಪರ್ಧಾತ್ಮಕ ಸವಾಲುಗಳನ್ನು ಆಹ್ವಾನಿಸುವ ಮೂಲಕ ನಡೆಸಿಕೊಂಡು ಹೋಗಲಾಯಿತು. ಟೆಂಡರ್ ಪ್ರಕ್ರಿಯೆಯನ್ನು ಕರ್ನಾಟಕ ಸಾರ್ವಜನಿಕ ಖರೀದಿ/ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಟಿಪಿ) ಅಧಿನಿಯಮ[69] 1999 ಮತ್ತು ಕರ್ನಾಟಕ

---

[67] ಕಂಪನಿಯನ್ನು ಕಂಪನಿಗಳ ಅಧಿನಿಯಮ, 1956 ಅಡಿಯಲ್ಲಿ ಕರ್ನಾಟಕ ಸರ್ಕಾರದ ಒಂದು ಸಂಪೂರ್ಣ ಸ್ವಾಮ್ಯದಲ್ಲಿರುವ ಕಂಪನಿಯನ್ನಾಗಿ ಸ್ಥಾಪಿಸಲಾಗಿದೆ (ಜುಲೈ 1999).

[68] 8 ಎಂವಿಎ, 10 ಎಂವಿಎ, 12.5 ಎಂವಿಎ, 16/20 ಎಂವಿಎ, 31.5 ಎಂವಿಎ, 100 ಎಂವಿಎ ಹಾಗೂ 150/167 ಎಂವಿಎ ಟ್ರಾನ್ಸ್‌ಫಾರ್ಮರ್‌ಗಳು.

[69] ಈ ಅಧಿನಿಯಮದ ಅನುಸಾರ, ಖರೀದಿ/ಸಂಗ್ರಹಣೆಯನ್ನು ಮಾಡುವ ಯಾವುದೇ ಸಂಸ್ಥೆಯು ಸರಕುಗಳು ಮತ್ತು ಸೇವೆಗಳ ಮೌಲ್ಯವು ನಿರ್ಮಾಣದ ಕಾಮಗಾರಿಗಳಿಗೆ ರೂಪಾಯಿಗಳು ಐದು ಲಕ್ಷ ಮೊತ್ತವನ್ನು ದಾಟಿದಲ್ಲಿ ಹಾಗೂ ನಿರ್ಮಾಣದ ಕಾಮಗಾರಿಗಳನ್ನು ಹೊರತುಪಡಿಸಿದಂತೆ ರೂಪಾಯಿ ಒಂದು ಲಕ್ಷ ದಾಟಿದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸುವುದನ್ನು ಹೊರತುಪಡಿಸಿ ಅನ್ಯಥಾ ಬೇರೆ ಯಾವ ರೀತಿಯಲ್ಲಿಯೂ ಸರಕುಗಳನ್ನು ಖರೀದಿಸುವಂತಿಲ್ಲ ಅಥವಾ ಸೇವೆಗಳನ್ನು ಪಡೆದುಕೊಳ್ಳುವಂತಿಲ್ಲ.

ಸಾರ್ವಜನಿಕ ಖರೀದಿ/ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಟಿಪಿ) ನಿಯಮಗಳು, 2000ದ ಅಡಿಯಲ್ಲಿ ನಿರ್ವಹಿಸಲ್ಪಟ್ಟಿತು.

ಕಂಪನಿಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ನೇತೃತ್ವದಲ್ಲಿರುವ ರಿಲೆ ಮತ್ತು ಪರೀಕ್ಷಣಾ (ಆರ್ ಟಿ) ವಿಭಾಗವು ಹಾಗೂ ಓರ್ವ ಮುಖ್ಯ ಇಂಜಿನಿಯರ್‌ರವರ ನೇತೃತ್ವದಲ್ಲಿರುವ ವಿದ್ಯುತ್ ಪ್ರಸರಣ ವಲಯವು[70] ಕೆಟ್ಟು ಹೋಗಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಗುರುತಿಸಲು ಮತ್ತು ದುರಸ್ತಿ ಮಾಡಿಸಲು ಹಾಗೂ ಅವುಗಳನ್ನು ವಿದ್ಯುತ್ ಪ್ರಸರಣ ವ್ಯವಸ್ಥೆಯಲ್ಲಿ ಪುನರ್–ಸ್ಥಾಪಿಸಲು ಪ್ರಾಥಮಿಕವಾಗಿ ಜವಾಬ್ದಾರರಾಗಿರುತ್ತಾರೆ. ಈ ಕೆಳಗಿನದು, ಕೆಟ್ಟು ಹೋಗಿರುವ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗಾಗಿ ಸುತ್ತೋಲೆಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದ (ಜುಲೈ 2009) ಕಾರ್ಯಚಟುವಟಿಕೆಗಳು/ನಿಗದಿತ ವೇಳಾಪಟ್ಟಿಗಳ ಕ್ರಮಾನುಗತಿಯಾಗಿರುತ್ತದೆ.

**ರೇಖಾಚಿತ್ರ ಸಂಖ್ಯೆ: 3.2.1: ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯ ಕಾರ್ಯಚಟುವಟಿಕೆಗಳ ವೇಳಾಪಟ್ಟಿ**

| ರಿಲೆ ಮತ್ತು ಪರೀಕ್ಷಣಾ (ಆರ್ ಟಿ) ವಿಭಾಗ (ಉಪಕರಣವು ಕೆಟ್ಟು ಸ್ಥಗಿತಗೊಂಡಿರುವ ದಿನಾಂಕದಿಂದ 15 ದಿನಗಳು) | |
|---|---|
| ಕೆಟ್ಟು ಸ್ಥಗಿತಗೊಂಡಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಪೂರ್ವಭಾವಿಯಾಗಿ ಪರೀಕ್ಷಣೆ ನಡೆಸುವುದು | ದುರಸ್ತಿ ಕಾರ್ಯದ ಸರಿಸುಮಾರು ಅಂದಾಜನ್ನು ತಯಾರಿಸುವುದು ಹಾಗೂ ಟಿಆರ್‌ಸಿಗೆ ಸಲ್ಲಿಸುವುದು |

↓

| ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಸಮಿತಿ (ಟಿಆರ್‌ಸಿ) (ಕೆಟ್ಟು ಸ್ಥಗಿತಗೊಂಡ ದಿನಾಂಕದಿಂದ 15 ದಿನಗಳು) | |
|---|---|
| ಕೆಟ್ಟು ಸ್ಥಗಿತಗೊಂಡಿರುವ ಟ್ರಾನ್ಸ್‌ಫಾರ್ಮರನ್ನು ದುರಸ್ತಿ ಮಾಡಿಸುವುದೋ ಅಥವಾ ವ್ಯರ್ಥ/ನಿರುಪಯುಕ್ತ ಎಂಬುದಾಗಿ ನಿರ್ಧರಿಸುವುದು | ದುರಸ್ತಿ ಮಾಡಿಸಲು ತೀರ್ಮಾನಿಸಿದಲ್ಲಿ, ಟೆಂಡರ್‌ಗಳನ್ನು ಆಹ್ವಾನಿಸುವ ಸಲುವಾಗಿ ವಲಯದ ಮುಖ್ಯ ಇಂಜಿನಿಯರ್‌ರವರು ಕ್ರಮಗಳನ್ನು ಕೈಗೊಳ್ಳುವರು |

↓

| ವಲಯದ ಮುಖ್ಯ ಇಂಜಿನಿಯರ್‌ರವರು (ಟೆಂಡರ್ ಆಹ್ವಾನಕ್ಕೆ 60 ದಿನಗಳು, ಗುತ್ತಿಗೆದಾರರು ಕೆಟ್ಟು ಸ್ಥಗಿತಗೊಂಡಿರುವ ಟ್ರಾನ್ಸ್‌ಫಾರ್ಮರನ್ನು ದುರಸ್ತಿಗಾಗಿ ತೆಗೆದುಕೊಂಡು ಹೋಗಲು ಹಾಗೂ ದುರಸ್ತಿಯ ಪೂರ್ವದ ಜಂಟಿ ಪರೀಕ್ಷಣೆಗಾಗಿ 30 ದಿನಗಳು) | |
|---|---|
| ಇ–ಟೆಂಡರಿನ ಮೂಲಕ ಸವಾಲುಗಳನ್ನು ಆಹ್ವಾನಿಸುತ್ತಾರೆ | ವಹಿಸುವಿಕೆ ಪತ್ರವನ್ನು ನೀಡುತ್ತಾರೆ, ಗುತ್ತಿಗೆದಾರರು ವಿದ್ಯುತ್ ಟ್ರಾನ್ಸ್‌ಫಾರ್ಮರನ್ನು ದುರಸ್ತಿಗೆ ತೆಗೆದುಕೊಂಡು ಹೋಗುತ್ತಾರೆ, ಜಂಟಿ–ಪರೀಕ್ಷಣೆ ಮತ್ತು ಸವಿವರ ಕಾಮಗಾರಿ ಆದೇಶವನ್ನು ನೀಡುತ್ತಾರೆ |

↓

| ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ, ಪರೀಕ್ಷಣೆ ಮತ್ತು ಪುನರ್–ಕಾರ್ಯೋದ್ಯುಕ್ತಗೊಳಿಸುವಿಕೆ | |
|---|---|
| ದುರಸ್ತಿ ಮಾಡುವ ಗುತ್ತಿಗೆದಾರರು 4 ತಿಂಗಳುಗಳ ಒಳಗೆ (31.5 ಎಂವಿಎವರೆಗೆ) ಅಥವಾ 6 ತಿಂಗಳುಗಳ (100 ಎಂವಿಎವರೆಗೆ) ಒಳಗೆ ದುರಸ್ತಿ ಮಾಡುತ್ತಾರೆ. | ಆರ್‌ಟಿ ವಿಭಾಗದಿಂದ ಪರೀಕ್ಷಣೆ, ಪುನರ್–ಕಾರ್ಯೋದ್ಯುಕ್ತಗೊಳಿಸುವಿಕೆ (15 ದಿನಗಳು) ಹಾಗೂ ಅಗತ್ಯವಿರುವ ಉಪ–ಸ್ಟೇಷನ್ನಿಗೆ ಹಂಚಿಕೆ (60 ದಿನಗಳು) |

**(ಆವರಣದಲ್ಲಿ ಸೂಚಿಸಿದ ದಿನಗಳು ಕಾರ್ಯಚಟುವಟಿಕೆಗೆ ಅನುಮತಿಸಲಾದ ಅವಧಿಯನ್ನು ಸೂಚಿಸುತ್ತವೆ)**

### ಲೆಕ್ಕಪರಿಶೋಧನೆಯ ವ್ಯಾಪ್ತಿ

**3.2.2.** ಕಂಪನಿಯು ನೀಡಿದ್ದ (ಜುಲೈ 2009/ಜೂನ್ 2016) ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳಿಗೆ ಮತ್ತು ಕರ್ನಾಟಕ ಸಾರ್ವಜನಿಕ ಖರೀದಿ/ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಟಿಪಿ) ಅಧಿನಿಯಮ, 1999 ಮತ್ತು ಕರ್ನಾಟಕ ಸಾರ್ವಜನಿಕ ಖರೀದಿ/ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಟಿಪಿ) ನಿಯಮಗಳು, ಹಾಗೂ ಅವುಗಳ ಅಡಿಯಲ್ಲಿ ನೀಡಲಾಗಿರುವ ಸಂಬಂಧಿತ ಸುತ್ತೋಲೆಗಳಿಗೆ ಬದ್ಧತೆಯಿಂದ ಕೂಡಿದ್ದು ಕೆಟ್ಟು ಸ್ಥಗಿತಗೊಂಡಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು

[70] ಕಂಪನಿಯು, ಕ್ಷೇತ್ರ ಮಟ್ಟದಲ್ಲಿ ವಿದ್ಯುತ್ ಪ್ರಸರಣ ವ್ಯವಸ್ಥೆಗೆ ಸಂಬಂಧಿತ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವ ಸಲುವಾಗಿ ಓರ್ವ ಮುಖ್ಯ ಇಂಜಿನಿಯರ್‌ರವರ ನೇತೃತ್ವದಲ್ಲಿರುವ ಆರು ವಲಯಗಳನ್ನು ಹೊಂದಿದೆ.

ನಿರ್ದಿಷ್ಟ ಸಮಯದೊಳಗೆ ಗುರುತಿಸಲಾಗಿತ್ತೇ ಹಾಗೂ ದುರಸ್ತಿ ಮಾಡಲಾಗಿತ್ತೇ ಎಂಬುದನ್ನು ನಿರ್ಧಾರಣೆ ಮಾಡುವ ಸಲುವಾಗಿ. ಕಂಪನಿಯ ಆರು ವಲಯಗಳಲ್ಲಿನ 126 ಕೆಟ್ಟು ಸ್ಥಗಿತಗೊಂಡಿದ್ದ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ ಮೂರು ವಲಯಗಳಲ್ಲಿನ[71] ಸವಕಳಿಯ ಕಳೆದನಂತರದಲ್ಲಿ ₹ 59.62 ಕೋಟಿ ಮೊತ್ತದಷ್ಟು ನಿವ್ವಳ ಮೌಲ್ಯವನ್ನು ಹೊಂದಿದ್ದ 86 ಕೆಟ್ಟು ಸ್ಥಗಿತಗೊಂಡಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ[72] ಸಂಬಂಧಿತ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಿತು. ಲೆಕ್ಕಪರಿಶೋಧನೆಯು ಮಾದರಿ ಆಯ್ಕೆ ಮಾಡಿಕೊಂಡಿದ್ದ 86 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು 2013–19ರ ಅವಧಿಯಲ್ಲಿನ ಕೆಟ್ಟು ಸ್ಥಗಿತಗೊಂಡಿದ್ದ ಒಟ್ಟಾರೆ ಟ್ರಾನ್ಸ್‌ಫಾರ್ಮರ್‌ಗಳ ಶೇಕಡಾ 68.25ರಷ್ಟನ್ನು ಪ್ರತಿನಿಧಿಸುತ್ತಿದ್ದವು.

**ದುರಸ್ತಿಗಳ ನಿರ್ವಹಣೆ**

**3.2.3.** ಕಂಪನಿಯು ಕೆಟ್ಟು ಸ್ಥಗಿತಗೊಂಡಿರುವ/ಲೋಪದೋಷದಿಂದ ಕೂಡಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಪ್ರಕ್ರಿಯೆಯನ್ನು ನಿರ್ದಿಷ್ಟಪಡಿಸಲಾಗಿದ್ದ ಕಾಲ ಮಿತಿಗಳ (ಜುಲೈ 2009) ಅನುಸಾರ ನಡೆಸಿಕೊಂಡು ಹೋಗಬೇಕಿತ್ತು. ಒಂದು ಕೆಟ್ಟು ಸ್ಥಗಿತಗೊಂಡಿದ್ದ ಟ್ರಾನ್ಸ್‌ಫಾರ್ಮರನ್ನು ದುರಸ್ತಿ ಮಾಡಿಸಿಕೊಳ್ಳಲು ಹಾಗೂ ಅಗತ್ಯವನ್ನು ಹೊಂದಿರುವ ಉಪ–ಸ್ಟೇಷನ್ನಿಗೆ ಪುನರ್–ಹಂಚಿಕೆ ಮಾಡಲು ಅನುವು ಮಾಡಲಾಗಿದ್ದ ಒಟ್ಟಾರೆ ಸಮಯವು 360 ದಿನಗಳಾಗಿತ್ತು. (***ರೇಖಾಚಿತ್ರ ಸಂಖ್ಯೆ 3.2.1***ನ್ನು ಗಮನಿಸುವುದು)

ಒಂದು ನಿರ್ದಿಷ್ಟವಾಗಿ ರೂಪಿಸಲಾಗಿದ್ದ ವೇಳಾಪಟ್ಟಿಯನ್ನು ಹೊಂದಿದ್ದಾಗ್ಯೂ, ಕೆಟ್ಟು ಸ್ಥಗಿತಗೊಂಡಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ದುರಸ್ತಿ ಮಾಡಿಸಿರಲಿಲ್ಲ ಮತ್ತು ಪ್ರಸರಣ ವ್ಯವಸ್ಥೆಯಲ್ಲಿ ಪುನರ್–ಸ್ಥಾಪಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 126 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ ಲೆಕ್ಕಪರಿಶೋಧನೆಯಲ್ಲಿ ಸಮೀಕ್ಷಿಸಲಾದ ಕೆಟ್ಟು ಸ್ಥಗಿತಗೊಂಡಿದ್ದ 86 ಟ್ರಾನ್ಸ್‌ಫಾರ್ಮರ್‌ಗಳ ಸ್ಥಿತಿಗತಿಯನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿದೆ:

**ರೇಖಾಚಿತ್ರ ಸಂಖ್ಯೆ 3.2.2: ಕೆಟ್ಟು ಸ್ಥಗಿತಗೊಂಡಿದ್ದ ಟ್ರಾನ್ಸ್‌ಫಾರ್ಮರ್‌ಗಳ ಸ್ಥಿತಿಗತಿ**




86 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ ಕೇವಲ 18ನ್ನು (ಶೇಕಡಾ 21) ನಿರ್ದಿಷ್ಟ ಕಾಲಮಿತಿಯೊಳಗೆ ದುರಸ್ತಿ ಮಾಡಿಸಲಾಗಿತ್ತು ಹಾಗೂ ನಿರ್ದಿಷ್ಟ 360 ದಿನಗಳನ್ನು ಮೀರಿದಂತೆ 11 ಟ್ರಾನ್ಸ್‌ಫಾರ್ಮರ್‌ಗಳನ್ನು ಒಂದು ವರ್ಷದಿಂದ ಎಂಟು ವರ್ಷಗಳನ್ನು ಮೀರಿದಂತೆ ವಿಳಂಬದೊಂದಿಗೆ ದುರಸ್ತಿ ಮಾಡಿಸಲಾಗಿತ್ತು ಎಂಬುದನ್ನು ಗಮನಿಸಬಹುದು (***ಕಂಡಿಕೆ 3.2.4***ನ್ನು ಗಮನಿಸುವುದು).

---

[71] ಬೆಂಗಳೂರು–36 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಸವಕಳಿ ಕಳೆದನಂತರದ ಮೌಲ್ಯ ₹ 24.78 ಕೋಟಿ, ಮೈಸೂರು–13 ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸವಕಳಿ ಕಳೆದನಂತರದ ಮೌಲ್ಯ ₹ 9.22 ಕೋಟಿ ಹಾಗೂ ಬಾಗಲಕೋಟೆ–37 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು–ಸವಕಳಿ ಕಳೆದ ನಂತರದ ಮೌಲ್ಯ ₹ 25.62 ಕೋಟಿ.

[72] ಅತ್ಯಧಿಕ ಸಂಖ್ಯೆಯಲ್ಲಿ ಕೆಟ್ಟು ಸ್ಥಗಿತಗೊಂಡಿದ್ದ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆಗಳನ್ನು ಪರಿಗಣಿಸಿ ಅದೇ ಕ್ರಮಾಂಕದಲ್ಲಿ ಮೂರು ವಲಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು.

ಇನ್ನೂ ದುರಸ್ತಿ ಮಾಡಿಸುವುದು (ಡಿಸೆಂಬರ್ 2019) ಬಾಕಿಯಿದ್ದಂತಹ ₹ 41.55 ಕೋಟಿ ಮೌಲ್ಯದ ಉಳಿಕೆ 55 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ (***ಅನುಬಂಧ–14***ನ್ನು ಗಮನಿಸುವುದು) 33 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು (₹ 28 ಕೋಟಿ ಮೌಲ್ಯದ) ದುರಸ್ತಿ ಮಾಡುವವರು ಗುತ್ತಿಗೆ ಷರತ್ತುಗಳ ಅನುಸಾರ ನಿರ್ದಿಷ್ಟ ಅವಧಿಯು ಮುಕ್ತಾಯಗೊಂಡನಂತರವೂ (**ಕಂಡಿಕೆ 3.2.5**ನ್ನು ಗಮನಿಸುವುದು) ಇಟ್ಟುಕೊಂಡಿದ್ದರು ಹಾಗೂ 22 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು, ಈ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಗುತ್ತಿಗೆಗಳನ್ನು ಅಂತಿಮ ರೂಪಕ್ಕೆ ತಂದಿರಲಿಲ್ಲವಾದ್ದರಿಂದ (***ಕಂಡಿಕೆ 3.2.6***ನ್ನು ಗಮನಿಸುವುದು) ಸಂಬಂಧಿತ ಉಪ–ಸ್ಟೇಷನ್‌ಗಳಲ್ಲಿ ಉಳಿದಿದ್ದವು (ಡಿಸೆಂಬರ್ 2019). ಈ 55 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ಸ್ಥಗಿತಗೊಂಡ ದಿನಾಂಕದಿಂದ ನಿರ್ದಿಷ್ಟ 360 ದಿನಗಳನ್ನು ಮೀರಿದಂತೆ ಒಂದು ತಿಂಗಳಿನಿಂದ ಏಳೂವರೆ ವರ್ಷಗಳವರೆಗೆ ನಿಷ್ಪ್ರಯೋಜಕವಾಗಿ ಉಳಿದಿದ್ದವು. ಕೆಟ್ಟು ಸ್ಥಗಿತಗೊಂಡಿರುವ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ ಶೇಕಡಾ 64ರಷ್ಟನ್ನು ಇನ್ನೂ ದುರಸ್ತಿ ಮಾಡಿಸಬೇಕಾಗಿರುತ್ತದೆ ಎಂಬ ವಾಸ್ತವಾಂಶವು ಕಂಪನಿಯ ನಿಕೃಷ್ಟಮಟ್ಟದ ದುರಸ್ತಿ ನಿರ್ವಹಣೆಯನ್ನು ತೋರಿಸುತ್ತದೆ.

***ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯಲ್ಲಿನ ವಿಳಂಬ***

**3.2.4.** ದುರಸ್ತಿ ಮಾಡಿಸಿ ಹಿಂದಕ್ಕೆ ಪಡೆಯಲಾಗಿದ್ದಂತಹ 11 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ, ದುರಸ್ತಿಯಾಗುವಲ್ಲಿನ ವಿಳಂಬಕ್ಕೆ ಟೆಂಡರ್‌ಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ ಹಾಗೂ ಕಾಮಗಾರಿಗಳನ್ನು ನೀಡುವಲ್ಲಿ ಆರ್‌ಟಿ ವಿಭಾಗಗಳು/ವಲಯಗಳಿಂದ ಆದಂತಹ ವಿಳಂಬಗಳು ಪ್ರಮುಖ ಕಾರಣವಾಗಿದ್ದವು ಎಂಬುದನ್ನು ಗಮನಿಸಲಾಯಿತು.

**ಕೋಷ್ಟಕ ಸಂಖ್ಯೆ 3.2.1: ದುರಸ್ತಿ ಮಾಡಲಾಗಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿ ಆದಂತಹ ವಿಳಂಬಗಳು**

| ಕ್ರಮ ಸಂಖ್ಯೆ | ಹಂತಗಳು | ನಿರ್ದಿಷ್ಟ ಅವಧಿ | ನಿರ್ದಿಷ್ಟ ಅವಧಿಯ ನಂತರ ವಿಳಂಬ |
|---|---|---|---|
| 1 | ಸರಿಸುಮಾರು ಅಂದಾಜಿನೊಂದಿಗೆ ಆರ್‌ಟಿ ವಿಭಾಗವು ಪ್ರಾರಂಭಿಕ ಪರೀಕ್ಷಣಾ ವರದಿಯನ್ನು ಸಲ್ಲಿಸುವುದು. | ಕೆಟ್ಟು ಸ್ಥಗಿತಗೊಂಡ ದಿನಾಂಕದಿಂದ 15 ದಿನಗಳು | 3 ರಿಂದ 72 ತಿಂಗಳುಗಳು |
| 2 | ಟೆಂಡರ್‌ಗಳ ಆಹ್ವಾನ ಮತ್ತು ವಹಿಸುವಿಕೆ ಪತ್ರದ ನೀಡಿಕೆ | ಪ್ರಾರಂಭಿಕ ಪರೀಕ್ಷಣಾ ವರದಿಯ ದಿನಾಂಕದಿಂದ 2 ತಿಂಗಳುಗಳು | 5 ರಿಂದ 14 ತಿಂಗಳುಗಳು |
| 3 | ದುರಸ್ತಿ ಮಾಡುವವರು ವಿದ್ಯುತ್ ಟ್ರಾನ್ಸ್‌ಫಾರ್ಮರನ್ನು ತೆಗೆದುಕೊಂಡು ಹೋಗುವುದು ಮತ್ತು ಸವಿವರ ಕಾಮಗಾರಿ ಆದೇಶವನ್ನು (ಡಿಡಬ್ಲ್ಯೂಎ) ನೀಡುವುದು | ವಹಿಸುವಿಕೆ ಪತ್ರದ ದಿನಾಂಕದಿಂದ 1 ತಿಂಗಳು | 5 ರಿಂದ 30 ತಿಂಗಳುಗಳು |
| 4 | ದುರಸ್ತಿ | ಸವಿವರ ಕಾಮಗಾರಿ ಆದೇಶದಿಂದ 4 ತಿಂಗಳುಗಳು | 1 ರಿಂದ 14 ತಿಂಗಳುಗಳು |

ಆರ್‌ಟಿ ವಿಭಾಗಗಳು/ವಲಯಗಳ ಕಾರಣದಿಂದ ಆಗಿದ್ದ ವಿಳಂಬಗಳು (ಟೆಂಡರ್ ಪ್ರಕ್ರಿಯೆಗಳನ್ನು ನಡೆಸುವುದು ಹಾಗೂ ವಹಿಸುವಿಕೆ ಪತ್ರ/ಸವಿವರ ಕಾಮಗಾರಿ ಆದೇಶ ನೀಡಿಕೆಯಲ್ಲಿ) 3 ತಿಂಗಳುಗಳಿಂದ 72 ತಿಂಗಳುಗಳವರೆಗೆ ಆಗಿದ್ದವಾದಲ್ಲಿ, ದುರಸ್ತಿ ಮಾಡುವವರ ಕಾರಣದಿಂದ ಸಂಭವಿಸಿದ್ದ ವಿಳಂಬವು ಪೂರ್ಣಗೊಳಿಸಲು ಗುತ್ತಿಗೆಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಅವಧಿಯು ಮುಕ್ತಾಯಗೊಂಡನಂತರ 1 ತಿಂಗಳಿನಿಂದ 14 ತಿಂಗಳುಗಳವರೆಗೆ ಆಗಿತ್ತು. ಆರ್‌ಟಿ ವಿಭಾಗಗಳು/ವಲಯಗಳು ಮತ್ತು ದುರಸ್ತಿ ಮಾಡುವವರು, ಇವರಿಬ್ಬರ ಕಡೆಗಳಿಂದ ಆದಂತಹ ಈ ವಿಳಂಬಗಳು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ವಿದ್ಯುತ್ ಪ್ರಸರಣ ವ್ಯವಸ್ಥೆಯಲ್ಲಿ ಪುನರ್–ಸ್ಥಾಪಿಸುವಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ಸ್ಥಗಿತಗೊಂಡ ದಿನಾಂಕದಿಂದ ನಿರ್ದಿಷ್ಟ ಪಡಿಸಲಾಗಿದ್ದ 360 ದಿನಗಳನ್ನು ಮೀರಿದಂತೆ ಒಂದರಿಂದ ಎಂಟು ವರ್ಷಗಳವರೆಗೆ ವಿಳಂಬಗೊಂಡಿತು (***ಅನುಬಂಧ–15***ನ್ನು ಗಮನಿಸುವುದು). ವಲಯಗಳು ಟೆಂಡರ್‌ಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ (ವಹಿಸುವಿಕೆ ಪತ್ರಗಳನ್ನು ನೀಡುವುದು/ಸವಿವರ ಕಾಮಗಾರಿ ಆದೇಶಗಳನ್ನು ನೀಡುವುದನ್ನು ಒಳಗೊಂಡಂತೆ) ಸಮಯೋಚಿತ ಕ್ರಮಗಳನ್ನು ಕೈಗೊಂಡಿದ್ದಲ್ಲಿ ಅಂತಹ ವಿಳಂಬಗಳನ್ನು ತಪ್ಪಿಸಬಹುದಾಗಿತ್ತು. ಕಂಪನಿಯ ಕಡೆಯಿಂದಾದ ಅಂತಹ ವಿಳಂಬಗಳಿಗೆ ಕಾರಣಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ. ಅಲ್ಲದೆಯೇ, ಗುತ್ತಿಗೆಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದ ದಿನಾಂಕಗಳನ್ನು ಮೀರಿದಂತೆ ದುರಸ್ತಿ

ಮಾಡುವವರ ಕಡೆಯಿಂದ ಸಂಭವಿಸಿದ್ದ ವಿಳಂಬಗಳಿಗೆ ಕಂಪನಿಯು ದುರಸ್ತಿ ಮಾಡುವವರ ಮೇಲೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ.

***ದುರಸ್ತಿ ಮಾಡುವವರು ಇಟ್ಟುಕೊಂಡಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು***

**3.2.5.** 33 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗಾಗಿ ಗುತ್ತಿಗೆ ಕಾಮಗಾರಿ ವಹಿಸುವಿಕೆ ಪತ್ರಗಳನ್ನು ಮೇ 2012 ಮತ್ತು ಮಾರ್ಚ್ 2019ರ ನಡುವೆ ನೀಡಲಾಗಿತ್ತು (***ಅನುಬಂಧ–16***ನ್ನು ಗಮನಿಸುವುದು). ಗುತ್ತಿಗೆ ಕಾಮಗಾರಿ ನೀಡಿಕೆಯಲ್ಲಿ ವಲಯದ ಕಡೆಯಿಂದ ಹಾಗೂ ಅಲ್ಲದೆಯೇ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿ ಮಾಡುವಲ್ಲಿ ಗುತ್ತಿಗೆದಾರರುಗಳ ಕಡೆಯಿಂದ ಗಮನಾರ್ಹವಾದಂತಹ ವಿಳಂಬವಾಗಿದ್ದುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಇದು ದುರಸ್ತಿಗಳನ್ನು ಪೂರ್ಣಗೊಳಿಸುವ ಸಲುವಾಗಿ ನಿರ್ದಿಷ್ಟಪಡಿಸಲಾಗಿದ್ದ ದಿನಾಂಕವನ್ನು ಮೀರಿದಂತೆ ಈ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿ ಮಾಡುವವರು ತಮ್ಮಲ್ಲಿ ಉಳಿದುಕೊಳ್ಳುವಲ್ಲಿಗೆ (ಡಿಸೆಂಬರ್ 2019) ದಾರಿ ಮಾಡಿಕೊಟ್ಟಿತು. ವಲಯಗಳಿಂದ 33 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಟೆಂಡರ್‌ಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ ಹಾಗೂ ಗುತ್ತಿಗೆಗಳನ್ನು ನೀಡುವಲ್ಲಿ ಆಗಿದ್ದಂತಹ ವಿಳಂಬ ಹಾಗೂ ಗುತ್ತಿಗೆದಾರರುಗಳಿಂದ ಆಗಿದ್ದಂತಹ ವಿಳಂಬಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ:

**ಕೋಷ್ಟಕ ಸಂಖ್ಯೆ 3.2.2: ದುರಸ್ತಿ ಮಾಡುವವರಿಂದ ಸ್ವೀಕರಿಸಬೇಕಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿ ವಿಳಂಬಗಳು**

| ಕ್ರಮ ಸಂಖ್ಯೆ | ಹಂತಗಳು | ನಿರ್ದಿಷ್ಟಪಡಿಸಲಾಗಿದ್ದ ಅವಧಿ | ನಿರ್ದಿಷ್ಟಪಡಿಸಲಾಗಿದ್ದ ಅವಧಿಯನ್ನು ಮೀರಿದಂತೆ ಆಗಿದ್ದ ವಿಳಂಬ |
|---|---|---|---|
| 1 | ಸರಿಸುಮಾರು ಅಂದಾಜಿನೊಂದಿಗೆ ಆರ್‌ಟಿ ವಿಭಾಗವು ಪ್ರಾರಂಭಿಕ ಪರೀಕ್ಷಣಾ ವರದಿಯನ್ನು ಸಲ್ಲಿಸುವುದು | ಕೆಟ್ಟು ಸ್ಥಗಿತಗೊಂಡ ದಿನಾಂಕದಿಂದ 15 ದಿನಗಳು | 2 ರಿಂದ 46 ತಿಂಗಳುಗಳು |
| 2 | ಟೆಂಡರ್‌ಗಳ ಆಹ್ವಾನ ಮತ್ತು ವಹಿಸುವಿಕೆ ಪತ್ರದ ನೀಡಿಕೆ (ಎಲ್‌ಓಎ) | ಪ್ರಾರಂಭಿಕ ಪರೀಕ್ಷಣಾ ವರದಿಯ ದಿನಾಂಕದಿಂದ 2 ತಿಂಗಳುಗಳು | 2 ರಿಂದ 35 ತಿಂಗಳುಗಳು |
| 3 | ದುರಸ್ತಿ ಮಾಡುವವರು ವಿದ್ಯುತ್ ಟ್ರಾನ್ಸ್‌ಫಾರ್ಮರನ್ನು ತೆಗೆದುಕೊಂಡು ಹೋಗುವುದು ಮತ್ತು ಸವಿವರ ಕಾಮಗಾರಿ ಆದೇಶವನ್ನು (ಡಿಡಬ್ಲ್ಯುಎ) ನೀಡುವುದು | ವಹಿಸುವಿಕೆ ಪತ್ರದ ದಿನಾಂಕದಿಂದ 1 ತಿಂಗಳು | 3 ರಿಂದ 66 ತಿಂಗಳುಗಳು |
| 4 | ದುರಸ್ತಿ (ಡಿಸೆಂಬರ್ 2019ರಲ್ಲಿದ್ದಂತೆ) | ಸವಿವರ ಕಾಮಗಾರಿ ಆದೇಶದಿಂದ 4 ತಿಂಗಳುಗಳು | 4 ರಿಂದ 63 ತಿಂಗಳುಗಳು |

ಗುತ್ತಿಗೆಗಳ ಷರತ್ತುಗಳ ಅನುಸಾರ, ಟ್ರಾನ್ಸ್‌ಫಾರ್ಮರ್‌ಗಳನ್ನು ಜಂಟಿ ಪರೀಕ್ಷಣೆ/ಸವಿವರ ಕಾಮಗಾರಿ ಆದೇಶದ[73] ದಿನಾಂಕದಿಂದ ನಾಲ್ಕು ತಿಂಗಳುಗಳ ಒಳಗೆ ದುರಸ್ತಿ ಮಾಡಬೇಕಿತ್ತು. ದುರಸ್ತಿ ಮಾಡುವವರು ಕಾರ್ಯಗತಗೊಳಿಸಲು ವಿಫಲರಾದಲ್ಲಿ, ಕಂಪನಿಯು ಈ ನಿಟ್ಟಿನಲ್ಲಿ 30 ದಿನಗಳ ನೋಟೀಸನ್ನು ನೀಡಿದನಂತರ ಗುತ್ತಿಗೆಗಳನ್ನು ಮುಕ್ತಾಯಗೊಳಿಸಿ ಸಂಭಾವ್ಯ ಅಪಾಯಗಳು ಮತ್ತು ವೆಚ್ಚಗಳನ್ನು ಗುತ್ತಿಗೆದಾರರ ಜವಾಬ್ದಾರಿಗೆ ಹಾಕಿ, ಉಳಿಕೆ ಕಾಮಗಾರಿಗಳನ್ನು ಕಾರ್ಯಗತಗೊಳಿಸತಕ್ಕದ್ದು. ಅಲ್ಲದೆಯೇ, ಗುತ್ತಿಗೆಯ ಷರತ್ತುಗಳು ಕಾರ್ಯನಿರ್ವಹಣಾ ಭದ್ರತೆಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಗುತ್ತಿಗೆಯ ಕಾರ್ಯನಿರ್ವಹಣೆ ಮಾಡದಿದ್ದುದಕ್ಕಾಗಿ ಸಮಾಪನ ನಷ್ಟಗಳನ್ನು ವಸೂಲಿ ಮಾಡಲು ಅನುವು ಮಾಡಿರುತ್ತವೆ. ಸಮಾಪನ ನಷ್ಟಗಳನ್ನು ಗುತ್ತಿಗೆ ಮೌಲ್ಯಗಳ ಶೇಕಡಾ 1/2ದಷ್ಟನ್ನು ವಾರ ಒಂದಕ್ಕೆ ಅಥವಾ ಅದರ ಒಂದು ಭಾಗಕ್ಕೆ ಗರಿಷ್ಠಕ್ಕೆ ಒಳಪಟ್ಟು ಗುತ್ತಿಗೆ ಮೌಲ್ಯದ ಶೇಕಡಾ 10ಕ್ಕೆ ಸೀಮಿತಗೊಳಿಸುವ ಷರತ್ತಿನೊಂದಿಗೆ ವಿಧಿಸಬೇಕಿತ್ತು.

ಲೆಕ್ಕಪರಿಶೋಧನೆಯು ಈ ಕೆಳಗಿನ ಲೋಪದೋಷಗಳನ್ನು ಗಮನಿಸಿತು:

---

[73] ಕಂಪನಿಯು ಕೆಟ್ಟು ಸ್ಥಗಿತಗೊಂಡಿರುವ ಟ್ರಾನ್ಸ್‌ಫಾರ್ಮರನ್ನು ದುರಸ್ತಿ ಮಾಡುವವರ ಸ್ಥಳದಲ್ಲಿ ಜಂಟಿ ಪರೀಕ್ಷಣೆಯನ್ನು ನಡೆಸುತ್ತದೆ ಹಾಗೂ ಅಗತ್ಯವಿರುವ ದುರಸ್ತಿಗಳ ಪರಿಮಾಣಗಳನ್ನು ನಿರ್ಧರಿಸುತ್ತದೆ ಹಾಗೂ ಸವಿವರ ಕಾಮಗಾರಿ ಆದೇಶವನ್ನು ನೀಡುತ್ತದೆ. ದುರಸ್ತಿ ಮಾಡುವವರು ಸವಿವರ ಕಾಮಗಾರಿ ಆದೇಶವನ್ನು ನೀಡಿದನಂತರವಷ್ಟೇ ದುರಸ್ತಿ ಕಾರ್ಯವನ್ನು ಕೈಗೊಳ್ಳತಕ್ಕದ್ದು. ಕೆಟ್ಟು ಸ್ಥಗಿತಗೊಂಡಿರುವ ಟ್ರಾನ್ಸ್‌ಫಾರ್ಮರನ್ನು ತೆಗೆದುಕೊಂಡು ಹೋದ ತಕ್ಷಣವೇ ದುರಸ್ತಿ ಮಾಡುವವರು ಜಂಟಿ ಪರೀಕ್ಷಣೆಗೆ ಅಹ್ವಾನಿಸತಕ್ಕದ್ದು (ವಹಿಸುವಿಕೆ ಪತ್ರದ ದಿನಾಂಕದಿಂದ 30 ದಿನಗಳು).

i. ಗುತ್ತಿಗೆದಾರರುಗಳು ವಹಿಸುವಿಕೆ ಪತ್ರದ ದಿನಾಂಕದಿಂದ 30 ದಿನಗಳ ಒಳಗೆ ಕೆಟ್ಟು ತಟಸ್ಥಗೊಂಡಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದುಕೊಂಡು ಹೋಗತಕ್ಕದ್ದು ಹಾಗೂ ಸವಿವರ ಅಂದಾಜನ್ನು ತಯಾರಿಸುವ ಸಲುವಾಗಿ ಹಾಗೂ ಸವಿವರ ಕಾಮಗಾರಿ ಆದೇಶವನ್ನು ನೀಡುವ ಸಲುವಾಗಿ ಜಂಟಿ–ಪರೀಕ್ಷಣೆಗೆ ಆಹ್ವಾನಿಸಬೇಕು. ಆದಾಗ್ಯೂ, ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದುಕೊಂಡು ಹೋಗುವಲ್ಲಿ ಹಾಗೂ ಜಂಟಿ ಪರೀಕ್ಷಣೆಗೆ ಆಹ್ವಾನಿಸಲು ನಿರ್ದಿಷ್ಟಪಡಿಸಲಾಗಿದ್ದ ಅವಧಿಯನ್ನು ಮೀರಿದಂತೆ ಒಂದು ತಿಂಗಳಿನಿಂದ ಮೂರು ತಿಂಗಳುಗಳವರೆಗೆ 33 ಟ್ರಾನ್ಸ್‌ಫಾರ್ಮರ್‌ಗಳ ಪೈಕಿ 28ರಲ್ಲಿ[74] ಆಗಿದ್ದಂತಹ ವಿಳಂಬಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು (***ಅನುಬಂಧ–17***ನ್ನು ಗಮನಿಸುವುದು). ಗುತ್ತಿಗೆಗಳ ಷರತ್ತುಗಳು ಸವಾಲು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಗುತ್ತಿಗೆಗಳನ್ನು ಮುಕ್ತಾಯಗೊಳಿಸಲು ಅನುವು ಮಾಡಿದ್ದವಾದರೂ, ವಲಯಗಳು ದಂಡ ವಿಧಿಸುವ ಅನುವುಗಳನ್ನು ಒತ್ತಾಯಪೂರ್ವಕವಾಗಿ ಜಾರಿಗೊಳಿಸಲಿಲ್ಲ.

ii. ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಜಂಟಿ ಪರೀಕ್ಷಣೆ/ಸವಿವರ ಕಾಮಗಾರಿ ಆದೇಶದ ದಿನಾಂಕದಿಂದ ನಾಲ್ಕು ತಿಂಗಳುಗಳ ಒಳಗೆ ದುರಸ್ತಿ ಮಾಡಬೇಕಿತ್ತು. ನಿರ್ದಿಷ್ಟಪಡಿಸಲಾಗಿದ್ದ ಕಾಲ ಮಿತಿಯನ್ನು ಮೀರಿದಂತೆ 4 ರಿಂದ 63 ತಿಂಗಳುಗಳ ವಿಳಂಬದೊಂದಿಗೆ, ದುರಸ್ತಿ ಮಾಡುವವರುಗಳು ಟ್ರಾನ್ಸ್‌ಫಾರ್ಮರ್‌ಗಳನ್ನು ನಿಗದಿತ ಸಮಯದ ಒಳಗೆ ನೀಡಲಿಲ್ಲ (ಡಿಸೆಂಬರ್ 2019). 33 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿ ದುರಸ್ತಿ ಮಾಡುವವರ ಕಾರಣಗಳಿಂದ ಆಗಿದ್ದ ವಿಳಂಬಗಳನ್ನು ಪರಿಗಣಿಸಿದಂತೆ ₹ 1.26 ಕೋಟಿ ಮೊತ್ತವನ್ನು ಸಮಾಪನ ನಷ್ಟವನ್ನಾಗಿ ವಿಧಿಸಬೇಕಿತ್ತು (***ಅನುಬಂಧ–17***ನ್ನು ಗಮನಿಸುವುದು), ಆದಾಗ್ಯೂ, ವಲಯಗಳು ದುರಸ್ತಿ ಮಾಡುವವರಿಗೆ ನೋಟೀಸುಗಳನ್ನು ಕೊಟ್ಟವಾದರೂ, ಈ ಮೊತ್ತವನ್ನು ವಿಧಿಸಲಿಲ್ಲ ಮತ್ತು ತಪ್ಪಿತಸ್ಥ ದುರಸ್ತಿದಾರರುಗಳಿಂದ ವಸೂಲಾತಿ ಮಾಡಲಿಲ್ಲ. ವಲಯಗಳು ನೀಡಿದ್ದ ನೋಟೀಸುಗಳಲ್ಲಿ ದುರಸ್ತಿಗಳಲ್ಲಿ ಆಗಿದ್ದಂತಹ ವಿಳಂಬವನ್ನು ಸ್ಪಷ್ಟಪಡಿಸುವ ವೇಳೆಯಲ್ಲಿ ಗುತ್ತಿಗೆ ಷರತ್ತುಗಳ ಅನುಸಾರ ಕ್ರಮವನ್ನು ಕೈಗೊಳ್ಳುವುದಾಗಿ ತಿಳಿಸಲಾಗಿತ್ತೇ ಹೊರತು, ತೆಗೆದುಕೊಳ್ಳಲಾದ ಯಾವುದೇ ಕ್ರಮಗಳು ಲೆಕ್ಕಪರಿಶೋಧನೆಯ ಗಮನಕ್ಕೆ ಬರಲಿಲ್ಲ.

iii. ಮೇಲಿನದಷ್ಟೇ ಅಲ್ಲದೆಯೇ, ಟೆಂಡರ್‌ಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ, ವಹಿಸುವಿಕೆ ಪತ್ರಗಳನ್ನು ನೀಡುವಲ್ಲಿ ಹಾಗೂ ಸವಿವರ ಕಾಮಗಾರಿ ಆದೇಶಗಳನ್ನು ನೀಡುವಲ್ಲಿ ವಲಯಗಳ ಕಡೆಯಿಂದ ಗಮನಾರ್ಹವಾದ ವಿಳಂಬಗಳಾಗಿದ್ದವು (66 ತಿಂಗಳುಗಳವರೆಗೆ). ಕಂಪನಿಯ ಕಡೆಯಿಂದ ಅಂತಹ ವಿಪರೀತವಾದಂತಹ ವಿಳಂಬಗಳಿಗೆ ಸಮರ್ಥನೀಯವಾದಂತಹ ಯಾವುದೇ ಕಾರಣಗಳು ದಾಖಲೆಗಳಲ್ಲಿ ಇರಲಿಲ್ಲ. ಆರ್‌ಟಿ ವಿಭಾಗವು ಉಪ–ಸ್ಟೇಷನ್‌ಗಳಲ್ಲಿನ ವಿದ್ಯುತ್ ಸ್ಥಗಿತಗಳು ಹಾಗೂ ಹೊಸ ಉಪ–ಸ್ಟೇಷನ್‌ಗಳನ್ನು ಕಾರ್ಯೋದ್ಯುಕ್ತಗೊಳಿಸುವಲ್ಲಿ ಪೂರ್ವನಿಗದಿಯಂತೆ ಕಾರ್ಯೋನ್ಮುಖವಾಗಿದ್ದು ಈ ನಿಟ್ಟಿನಲ್ಲಿ ವಿಳಂಬಕ್ಕೆ ಕಾರಣವಾಯಿತು ಎಂಬುದಾಗಿ ಕಂಪನಿಯು ತಿಳಿಸಿತು. ಇದು ದುರಸ್ತಿ ಪ್ರಕ್ರಿಯೆಯನ್ನು ಮುಂದೂಡಲು ಕಾರಣವಾಯಿತು.

ದುರಸ್ತಿಗಳಲ್ಲಿ ವಿಳಂಬಕ್ಕೆ ಕಾರಣವಾಗಿದ್ದ ದುರಸ್ತಿಗಳ ನಿರ್ವಹಣೆಯಲ್ಲಿ ಈ ಕೆಳಗಿನ ಲೋಪದೋಷಗಳನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು:

- ಈ ಸಂಸ್ಥೆಗಳು ಹಿಂದಿನ ಆದೇಶಗಳಲ್ಲಿ ನೀಡಲಾಗಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿ ಮಾಡಿ ಹಿಂತಿರುಗಿಸದಿದ್ದಾಗ್ಯೂ, ವಲಯಗಳು ಪದೇಪದೇ ಈ ಎರಡು ಸಂಸ್ಥೆಗಳ ಅವೆಂದರೆ ಮೆ॥ ತಾರಾಪುರ್ ಟ್ರಾನ್ಸ್‌ಫಾರ್ಮರ್ ಲಿಮಿಟೆಡ್, ಮುಂಬೈ ಇವರಿಗೆ ಮೇ 2012 ಮತ್ತು ಜುಲೈ 2016ರ ನಡುವೆ ಏಳು ಗುತ್ತಿಗೆಗಳನ್ನು ಹಾಗೂ ಮೆ. ವಿದ್ಯುತ್ ಟ್ರಾನ್ಸ್‌ಫಾರ್ಮರ್ಸ್ ಪ್ರೈವೇಟ್ ಲಿಮಿಟೆಡ್, ಕಚ್, ಇವರಿಗೆ ಮೇ 2013 ಮತ್ತು ಸೆಪ್ಟೆಂಬರ್ 2017ರ ನಡುವೆ ಎಂಟು ಗುತ್ತಿಗೆಗಳನ್ನು ನೀಡಲಾಗಿತ್ತು (***ಅನುಬಂಧ–18***ನ್ನು

[74] ***ಅನುಬಂಧ 17***ರ ಕ್ರಮ ಸಂಖ್ಯೆ 1, 2, 4ರಿಂದ 13, 15, 16, 17, 19ರಿಂದ 25, 27, 28 ಮತ್ತು 30ರಿಂದ 33.

ಉಲ್ಲೇಖಿಸುವುದು). ಹೊಸ ಆದೇಶಗಳನ್ನು ನೀಡುವ ಮೊದಲು ದುರಸ್ತಿ ಮಾಡುವವರ ಈ ಹಿಂದಿನ ಕಾರ್ಯನಿರ್ವಹಣೆಯನ್ನು ನಿರ್ಧಾರಣೆ ಮಾಡುವುದನ್ನು ವ್ಯವಸ್ಥೆಯು ಒಳಗೊಂಡಿರಲಿಲ್ಲವಾದ್ದರಿಂದ ಕಾಮಗಾರಿಗಳನ್ನು ನೀಡುವಲ್ಲಿನ ವ್ಯವಸ್ಥೆಯು ಅಷ್ಟರಮಟ್ಟಿಗೆ ನ್ಯೂನತೆಗಳಿಂದ ಕೂಡಿತ್ತು.

- ಸಂಬಂಧಿತ ವಲಯ ಮುಖ್ಯ ಇಂಜಿನಿಯರ್‌ಗಳು ದುರಸ್ತಿಗಳಲ್ಲಿನ ವಿಳಂಬಕ್ಕೆ ನೋಟೀಸುಗಳನ್ನು ನೀಡಿದ್ದರು ಮತ್ತು ನೆನಪಿಸುವ ಪತ್ರಗಳನ್ನು ಬರೆದಿದ್ದರು ಎಂಬುದನ್ನೂ ಸಹ ಗಮನಿಸಲಾಯಿತು. ಆದಾಗ್ಯೂ, ಮೂರು ವಲಯಗಳಲ್ಲಿ ಯಾವುದೇ ಒಂದು ಕೂಡ ತಪ್ಪಿತಸ್ಥ ದುರಸ್ತಿ ಮಾಡುವವರ ಮೇಲೆ ಸಮಾಪನ ನಷ್ಟಗಳನ್ನು ವಿಧಿಸುವ ಸಲುವಾಗಿ ಗುತ್ತಿಗೆ ಅನುವುಗಳನ್ನು ಒತ್ತಾಯಪೂರ್ವಕವಾಗಿ ಜಾರಿಗೊಳಿಸಿರಲಿಲ್ಲ ಅಥವಾ ಈ ಗುತ್ತಿಗೆಗಳನ್ನು ಒಳಗೊಂಡಿರಬಹುದಾದ ಸಂಭಾವ್ಯ ಅಪಾಯ ಮತ್ತು ಹೆಚ್ಚುವರಿ ವೆಚ್ಚಗಳನ್ನು ಗುತ್ತಿಗೆದಾರರಿಂದ ವಸೂಲಾತಿ ಮಾಡುವ ಷರತ್ತಿನೊಂದಿಗೆ ಮುಕ್ತಾಯಗೊಳಿಸಿ ಬಾಕಿ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಸಲುವಾಗಿ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ತತ್ಪರಿಣಾಮವಾಗಿ, ಅವರುಗಳು ಈ ನೋಟೀಸ್‌ಗಳಿಗೆ ಯಾವುದೇ ಪ್ರತಿಕ್ರಿಯೆಯನ್ನೂ ನೀಡಿರಲಿಲ್ಲವಾದ್ದರಿಂದ ಟ್ರಾನ್ಸ್‌ಫಾರ್ಮರ್‌ಗಳು ನಿರ್ಧಾರಿತ ದಿನಾಂಕಗಳನ್ನೂ ಮೀರಿದಂತೆ ಗುತ್ತಿಗೆದಾರರುಗಳಲ್ಲಿ ಉಳಿದುಕೊಂಡಿದ್ದವು.

- ಮುಂದುವರೆದು, ಕಂಪನಿಯು ನೀಡಿದ್ದ ನಿರ್ದೇಶನಗಳ (ಜೂನ್ 2016) ಅನುಸಾರ, ಸಂಬಂಧಿತ ವಲಯ ಮುಖ್ಯ ಇಂಜಿನಿಯರ್‌ರವರುಗಳು ದುರಸ್ತಿಯ ಸ್ಥಿತಿಗತಿಯನ್ನು ಪ್ರತೀ ತಿಂಗಳು ಸಮೀಕ್ಷಿಸುವ ಹಾಗೂ ಕಂಪನಿಯ ಸಾಂಸ್ಥಿಕ ಕಚೇರಿಯ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರಿಗೆ (ಯೋಜನೆ ಮತ್ತು ಮೇಲ್ವಿಚಾರಣೆ) ವರದಿಯನ್ನು ಸಲ್ಲಿಸುವ ಅಗತ್ಯತೆಯಿತ್ತು. ಏಳು ತಿಂಗಳುಗಳಿಗೂ ಮೀರಿದಂತೆ ದುರಸ್ತಿಯು ಬಾಕಿಯಿರುವ ಟ್ರಾನ್ಸ್‌ಫಾರ್ಮರ್‌ಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ವರದಿಯನ್ನು ಸಲ್ಲಿಸುವ ಅಗತ್ಯತೆಯೂ ಇತ್ತು. ಮುಖ್ಯ ಇಂಜಿನಿಯರ್‌ಗಳು ಅಂತಹ ವರದಿಯನ್ನು ಸಲ್ಲಿಸಿರುವುದಕ್ಕೆ ಯಾವುದೇ ದಾಖಲೆಗಳ ಸಾಕ್ಷ್ಯಾಧಾರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಈ ಲೋಪದೋಷವು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ದುರಸ್ತಿಗಳಲ್ಲಿನ ವಿಳಂಬದ ಸ್ವರೂಪದ ಮೇಲೆ ಯೋಜನೆ ಮತ್ತು ಮೇಲ್ವಿಚಾರಣೆಯ ಪ್ರಾಧಿಕಾರಕ್ಕೆ ಸಮಯೋಚಿತ ಮಾಹಿತಿಯ ಅನುಪಸ್ಥಿತಿಯ ಕಾರಣ ಮೇಲ್ವಿಚಾರಣೆಯ ಗುಣಮಟ್ಟಕ್ಕೆ ಅಡಚಣೆಯುಂಟು ಮಾಡಿತು.

ಈ ರೀತಿಯಾಗಿ ದುರಸ್ತಿ ಗುತ್ತಿಗೆಗಳನ್ನು ಕಾರ್ಯಗತಗೊಳಿಸುವಲ್ಲಿ ವಲಯಗಳ ಉದಾಸೀನ ಧೋರಣೆ, ಗುತ್ತಿಗೆಗಳನ್ನು ರದ್ದುಗೊಳಿಸಲು ಸಮಯೋಚಿತ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಅಥವಾ ತಪ್ಪಿತಸ್ಥ ದುರಸ್ತಿ ಮಾಡುವವರ ಮೇಲೆ ದಂಡ ವಿಧಿಸುವ ಅನುವುಗಳನ್ನು ಒತ್ತಾಯಪೂರ್ವಕವಾಗಿ ಜಾರಿಗೊಳಿಸುವಲ್ಲಿ ತೋರಿದ್ದ ಅಸಡ್ಡೆಯ ಮನೋಭಾವದ ಕಾರಣ, ಪ್ರಸರಣ ವ್ಯವಸ್ಥೆಗೆ ಅವುಗಳ ಕೆಟ್ಟು ಸ್ಥಗಿತಗೊಂಡಿದ್ದ ದಿನಾಂಕಗಳಿಂದ ಒಂದು ಗಮನಾರ್ಹವಾದಂತಹ ಅವಧಿಯ ನಂತರವೂ ₹ 28 ಕೋಟಿ ಮೊತ್ತದಷ್ಟು ನಿವ್ವಳ ಮೌಲ್ಯವನ್ನು ಹೊಂದಿದ್ದ 33 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಮರಳಿ ತಂದಿರಲಿಲ್ಲ.

ಆರ್‌ಟಿ ವಿಭಾಗವು ಉಪ-ಸ್ಟೇಷನ್‌ಗಳಲ್ಲಿನ ವಿದ್ಯುತ್ ಸ್ಥಗಿತಗಳನ್ನು ಸರಿಪಡಿಸುವುದಕ್ಕೆ ಸಂಬಂಧಿಸಿದಂತೆ ಮುಂಚಿನಿಂದಲೂ ಮಗ್ನರಾಗಿದ್ದ ಕಾರಣದಿಂದ ಹಾಗೂ ಸದಸ್ಯರುಗಳ ವಿಪರೀತವಾದಂತಹ ಕೆಲಸಕಾರ್ಯಗಳ ಕಾರಣ ಟ್ರಾನ್ಸ್‌ಫಾರ್ಮರ್ ದುರಸ್ತಿ ಸಮಿತಿಯ (ಟಿಆರ್‌ಸಿ) ಸಭೆಯನ್ನು ನಡೆಸಿರಲಿಲ್ಲವಾದ್ದರಿಂದ ವಿಳಂಬಗಳು ಸಂಭವಿಸಿದ್ದವು ಎಂಬುದಾಗಿ ಸರ್ಕಾರವು ಉತ್ತರಿಸಿತು (ಜುಲೈ 2020). ಟೆಂಡರ್‌ದಾರರುಗಳು/ದುರಸ್ತಿ ಮಾಡುವವರು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದುಕೊಂಡು ಹೋಗುವಲ್ಲಿನ ವಿಳಂಬಕ್ಕೆ ಸಂಬಂಧಿಸಿದಂತೆ, ಬ್ಯಾಂಕು ಖಾತರಿಗಳನ್ನು ನೀಡುವಲ್ಲಿ ವಿಳಂಬವಾಯಿತಾದ್ದರಿಂದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದುಕೊಂಡು ಹೋಗುವಲ್ಲಿ ವಿಳಂಬವಾಯಿತು ಎಂಬುದಾಗಿ ತಿಳಿಸಿತು. ಮುಂದುವರೆದು, 33 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ 15 ವಿದ್ಯುತ್ ಟಾನ್ಸ್‌ಫಾರ್ಮರುಗಳನ್ನು ದುರಸ್ತಿ ಮಾಡಲಾಗಿದೆ ಹಾಗೂ ಉಳಿಕೆ 18 ವಿದ್ಯುತ್

ಟ್ರಾನ್ಸ್‌ಫಾರ್ಮರ್‌ಗಳು ದುರಸ್ತಿ ಮಾಡುವವರಲ್ಲಿದ್ದು, ಅದಕ್ಕಾಗಿ ಕಂಪನಿಯು ಅವಿರತವಾಗಿ ಅನುಸರಣಾ ಕ್ರಮವನ್ನು ತೆಗೆದುಕೊಳ್ಳುತ್ತಿದೆ ಎಂಬುದಾಗಿ ತಿಳಿಸಿತು. ವಿಳಂಬಗಳಿಗೆ ಸಮಾಪನ ನಷ್ಟಗಳನ್ನು ವಿಧಿಸಲಾಗಿತ್ತು.

ದುರಸ್ತಿಗಳಿಗಾಗಿ ನಿಗದಿಪಡಿಸಲಾಗಿದ್ದ ಕಾಲಮಿತಿಯನ್ನು ಉಲ್ಲಂಘಿಸಿದ್ದರಿಂದ ಮತ್ತು ಆರ್‌ಟಿ ವಿಭಾಗವು ಕಾಲ ಮಿತಿಗೆ ಬದ್ಧವಾಗಿರುವಲ್ಲಿರುವ ತೊಂದರೆಗಳ ಬಗ್ಗೆ ಆಡಳಿತ ಮಂಡಳಿಯೊಂದಿಗೆ ಎಂದಾದರೂ ಚರ್ಚಿಸಿರುವ ಬಗ್ಗೆ ತೋರಿಸುವ ಯಾವುದೇ ದಾಖಲೆಗಳು ಇರಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಟಿಆರ್‌ಸಿ ಸಮಯೋಚಿತವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು ಆಡಳಿತ ಮಂಡಳಿ/ವ್ಯವಸ್ಥಾಪನೆಯ ಜವಾಬ್ದಾರಿಯಾಗಿತ್ತಾದ್ದರಿಂದ ಟಿಆರ್‌ಸಿಯ ಅವಿರತ ಕಾಯಕ್ರಮಗಳ ಕಾರಣ ವಿಳಂಬವು ಸಂಭವಿಸಿತು ಎಂಬುದು ಸಮರ್ಥನೆಯಿಂದ ಕೂಡಿರುವುದಿಲ್ಲ. ಬ್ಯಾಂಕು ಖಾತರಿಗಳನ್ನು ಒದಗಿಸದಿರುವ ಬಗ್ಗೆ ಗುತ್ತಿಗೆ ಷರತ್ತುಗಳ ಅನುಸಾರ ಗುತ್ತಿಗೆಯನ್ನು ಮುಕ್ತಾಯಗೊಳಿಸಲು ಕ್ರಮವನ್ನು ತೆಗೆದುಕೊಳ್ಳಬೇಕಿತ್ತು. 33 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ 18 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಇನ್ನೂ ದುರಸ್ತಿಯಾಗಬೇಕಾಗಿದೆ ಹಾಗೂ 15 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಗಮನಾರ್ಹ ವಿಳಂಬಗಳ ನಂತರ ದುರಸ್ತಿ ಮಾಡಲಾಗಿತ್ತು ಎಂಬ ವಾಸ್ತವಾಂಶವು ಉಳಿದುಕೊಂಡಿತ್ತು.

***ಕೆಟ್ಟು ಸ್ಥಗಿತಗೊಂಡಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಉಪ–ಸ್ಟೇಷನ್‌ಗಳಲ್ಲಿಟ್ಟುಕೊಂಡಿರುವುದು***

**3.2.6.** ₹ 13.55 ಕೋಟಿ ಮೌಲ್ಯದ 22 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗೆ ಗುತ್ತಿಗೆಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಿರುವ ವಿವಿಧ ಕಾರಣಗಳಿಂದಾಗಿ ಇನ್ನೂ ಅಂತಿಮ ರೂಪಕ್ಕೆ ತಂದಿರಲಿಲ್ಲ (ಡಿಸೆಂಬರ್ 2019) (***ಅನುಬಂಧ–19***ನ್ನು ಗಮನಿಸುವುದು):

**ರೇಖಾಚಿತ್ರ ಸಂಖ್ಯೆ 3.2.3: ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ದುರಸ್ತಿಯಾಗದೆಯೇ ಉಪ–ಸ್ಟೇಷನ್‌ಗಳಲ್ಲಿ ಉಳಿದಿರಲು ಕಾರಣಗಳು**




ವಲಯಗಳು ಏಳು ಟ್ರಾನ್ಸ್‌ಫಾರ್ಮರ್‌ಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿರಲಿಲ್ಲವಾದಲ್ಲಿ, ಒಂಬತ್ತು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಅರ್ಹತೆಯನ್ನು ಹೊಂದಿರುವ ಸವಾಲುದಾರರುಗಳು ಪ್ರತಿಕ್ರಿಯೆ ನೀಡದಿರಲು ಕಾರಣಗಳನ್ನು ಅದು ವಿಶ್ಲೇಷಿಸಿರಲಿಲ್ಲ. ಮುಂದುವರೆದು, ನಾಲ್ಕು ಗುತ್ತಿಗೆಗಳಲ್ಲಿ, ವಹಿಸುವಿಕೆ ಪತ್ರಗಳನ್ನು ನೀಡುವುದು ಬಾಕಿಯಿತ್ತು ಅಥವಾ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ವಹಿಸುವಿಕೆ ಪತ್ರಗಳನ್ನು ನೀಡಿದ ನಂತರವೂ ದುರಸ್ತಿ ಮಾಡುವವರು ತೆಗೆದುಕೊಂಡು ಹೋಗಿರಲಿಲ್ಲ. ತತ್ಪರಿಣಾಮವಾಗಿ, ಈ 22 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ದುರಸ್ತಿಯಾಗದೆಯೇ ಅವುಗಳು ಕೆಟ್ಟು ಸ್ಥಗಿತಗೊಂಡಿದ್ದ ದಿನಾಂಕದಿಂದ ಒಂದು ವರ್ಷದಿಂದ ಆರು ವರ್ಷಗಳಿಗೂ ಮೀರಿದಂತೆ ನಿಷ್ಪ್ರಯೋಜಕವಾಗಿ ಇದ್ದವು (ಡಿಸೆಂಬರ್ 2019).

22 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ ಆರು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡಿರುವುದು ಹಾಗೂ ಉಳಿದ 16 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ

ಸಂಬಂಧಿಸಿದಂತೆ ಮೂರು ಸಲಕ್ಕೂ ಅಧಿಕವಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾಗ್ಯೂ ಏಕೈಕ ಸವಾಲನ್ನು ಸ್ವೀಕರಿಸಲಾಗಿದೆ/ಯಾವುದೇ ಪ್ರತಿಕ್ರಿಯೆಯೂ ಸ್ವೀಕೃತಗೊಂಡಿರುವುದಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಜುಲೈ 2020). ಆದಾಗ್ಯೂ, 22 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ದುರಸ್ತಿಯಾಗದೆಯೇ ಅವುಗಳು ಕೆಟ್ಟು ಸ್ಥಗಿತಗೊಂಡ ದಿನಾಂಕದಿಂದ ಒಂದು ವರ್ಷದಿಂದ ಆರು ವರ್ಷಗಳನ್ನು ಮೀರಿದಂತೆ ನಿಷ್ಪ್ರಯೋಜಕವಾಗಿ ಉಳಿದಿದೆ ಎಂಬ ವಾಸ್ತವಾಂಶವು ಉಳಿದುಕೊಳ್ಳುತ್ತದೆ. ಮುಂದುವರೆದು, ಸವಾಲುದಾರರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸಲು ಕಾರಣಗಳನ್ನು ಕಂಪನಿಯು ವಿಶ್ಲೇಷಿಸಿರಲಿಲ್ಲ, ಏಕೈಕ ಸವಾಲಿಗೆ ಸಂಬಂಧಿಸಿದಂತೆ, ಮೂರನೆಯ ಪ್ರಯತ್ನ ಮಾಡಿದ ನಂತರ ಕರ್ನಾಟಕ ಸಾರ್ವಜನಿಕ ಖರೀದಿಗಳು/ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮದ ಅನುಸಾರ ಸಮರ್ಥನೆಯನ್ನು ದಾಖಲಿಸುವುದರೊಂದಿಗೆ ಗುತ್ತಿಗೆಗಳನ್ನು ನೀಡಬಹುದಾಗಿತ್ತು.

***ವಿಳಂಬಗಳ ಪರಿಣಾಮ – ದುರಸ್ತಿಗಳಲ್ಲಿನ ವಿಳಂಬದ ಕಾರಣ ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಖರೀದಿಯ ಮೇಲೆ ತಪ್ಪಿಸಬಹುದಾಗಿದ್ದ ವೆಚ್ಚಗಳು***

**3.2.7.** ಕಂಪನಿಯ ವಾರ್ಷಿಕ ಬಂಡವಾಳ ಕಾಮಗಾರಿಗಳ ಕಾರ್ಯಕ್ರಮದ ಒಂದು ಭಾಗವಾಗಿ, ಕಂಪನಿಯು ಹೊಸ ಉಪ-ಸ್ಟೇಷನ್‌ಗಳ ಸಂಖ್ಯೆಯನ್ನು ಹೆಚ್ಚಳಗೊಳಿಸುವ/ಸೃಷ್ಟಿಸುವ ಉದ್ದೇಶದಿಂದ ಮತ್ತು ದೋಷಪೂರಿತ/ಸ್ಥಗಿತಗೊಂಡಿದ್ದ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲು ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿಸುತ್ತದೆ. 2013–14ರಿಂದ 2018–19ರ ಅವಧಿಯಲ್ಲಿ ಮೂರು ವಲಯಗಳಲ್ಲಿ ₹ 231.61 ಕೋಟಿ ಒಟ್ಟಾರೆ ವೆಚ್ಚದಲ್ಲಿ 137 ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿಸಿತು ಎಂಬುದನ್ನು ಗಮನಿಸಲಾಯಿತು. ಕೆಟ್ಟು ಸ್ಥಗಿತಗೊಂಡಿದ್ದ ಟ್ರಾನ್ಸ್‌ಫಾರ್ಮರ್‌ಗಳನ್ನು ಸಮಯೋಚಿತವಾಗಿ ದುರಸ್ತಿ ಮಾಡಿಸಿದ್ದಲ್ಲಿ (***ಕಂಡಿಕೆ 3.2.5*** ಮತ್ತು ***3.2.6***ನ್ನು ಗಮನಿಸುವುದು) ಹಾಗೂ ಉಪಯೋಗಿಸುವುದಕ್ಕೆ ಲಭ್ಯವಾಗಿದ್ದಲ್ಲಿ, ಈ 137 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ, ₹ 75.90 ಕೋಟಿ[75] ಮೌಲ್ಯದ 55 ಸಂಖ್ಯೆಗಳಷ್ಟು ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಖರೀದಿಯನ್ನು ತಪ್ಪಿಸಬಹುದಾಗಿತ್ತು. ಈ ರೀತಿಯಾಗಿ ದುರಸ್ತಿಗಳ ನಿರ್ವಹಣೆಯಲ್ಲಿನ ಕಂಪನಿಯ ವಿಫಲತೆಯು ಹೆಚ್ಚುವರಿ ವೆಚ್ಚದಲ್ಲಿ ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಲ್ಲದೆಯೇ ₹ 41.55 ಕೋಟಿ ಮೌಲ್ಯದ 55 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ನಿಷ್ಪ್ರಯೋಜಕವಾಗಿ ಉಳಿಯುವಲ್ಲಿ ಪರಿಣಮಿಸಿತು.

ಹೊಸ ಉಪ-ಸ್ಟೇಷನ್‌ಗಳ ಸಂಖ್ಯೆಯನ್ನು ಹೆಚ್ಚಳಗೊಳಿಸುವ/ಹೊಸ ಉಪ-ಸ್ಟೇಷನ್‌ಗಳನ್ನು ಸ್ಥಾಪಿಸುವ ಅಗತ್ಯತೆಯನ್ನು ಪರಿಗಣಿಸಿ ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿಸಲಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಜುಲೈ 2020) ಯಾವುದಾದರೂ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ತಟಸ್ಥಗೊಂಡಲ್ಲಿ ಹಾಗೂ ಬಿಡಿ ಭಾಗಗಳು/ದುರಸ್ತಿ ಮಾಡಲಾಗಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಲಭ್ಯವಿರದಿದ್ದಲ್ಲಿ, ಅಂತಹ ಸಂದರ್ಭಗಳಲ್ಲಿ ಅಡಚಣೆರಹಿತ ವಿದ್ಯುತ್ ಸರಬರಾಜನ್ನು ಒದಗಿಸುವ ಸಲುವಾಗಿ ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಉಪಯೋಗಿಸಿಕೊಳ್ಳಲಾಗುವುದು. ಕೆಟ್ಟು ಸ್ಥಗಿತಗೊಂಡಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯಲ್ಲಿನ ವಿಳಂಬದ ಕಾರಣ ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿಸಲಾಯಿತು ಹಾಗೂ ಅವುಗಳನ್ನು ಬಳಸಿಕೊಳ್ಳಲಾಯಿತು ಎಂಬುದನ್ನು ಉತ್ತರವು ಖಚಿತಪಡಿಸುತ್ತದೆ, ದುರಸ್ತಿಗಳಿಗಾಗಿ ನಿರ್ದಿಷ್ಟಪಡಿಸಲಾಗಿದ್ದ ಕಾಲಮಿತಿಗಳಿಗೆ ಬದ್ಧತೆಯಿಂದ ಕೂಡಿದ್ದಲ್ಲಿ ಅದನ್ನು ತಪ್ಪಿಸಬಹುದಾಗಿತ್ತು.

**ನಿರ್ಣಯ**

- ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗಾಗಿ ನಿರ್ದಿಷ್ಟಪಡಿಸಲಾಗಿದ್ದಂತಹ ತಮ್ಮದೇ ಆದಂತಹ ಕಾಲಮಿತಿಗಳಿಗೆ ಬದ್ಧತೆಯಿಂದ ಕೂಡಿರಲು ವಲಯಗಳು ವಿಫಲಗೊಂಡಿದ್ದವು ಹಾಗೂ ಮೂರು ವಲಯಗಳಲ್ಲಿ ದುರಸ್ತಿ ಮಾಡಿಸಲು ಅಗತ್ಯವಿದ್ದಂತಹ ಒಟ್ಟಾರೆ ವಿದ್ಯುತ್

[75] ವಿದ್ಯುತ್ ಟ್ರಾನ್ಸ್‌ಫಾರ್ಮರ್ ಒಂದಕ್ಕೆ ಸರಾಸರಿ ಮೌಲ್ಯವು ₹ 1.69 ಕೋಟಿ ಎಂಬುದಾಗಿ ಪರಿಗಣಿಸಿ (₹ 231.61 ಕೋಟಿ/137), ಇದರಿಂದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಒಂದಕ್ಕೆ ಸರಾಸರಿ ದುರಸ್ತಿ ವೆಚ್ಚ ₹ 30.69 ಲಕ್ಷವನ್ನು ಕಳೆಯಲಾಗಿದೆ (55 x ₹ 1.38 ಕೋಟಿ = ₹ 75.90 ಕೋಟಿ)

ಟ್ರಾನ್ಸ್‌ಫಾರ್ಮರ್‌ಗಳ ಪೈಕಿ ಕೇವಲ ಶೇಕಡಾ 21ರಷ್ಟನ್ನು (86 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ 18) ನಿರ್ದಿಷ್ಟ ಕಾಲಮಿತಿಯ ಒಳಗೆ ದುರಸ್ತಿ ಮಾಡಿಸಿದ್ದವು. ದುರಸ್ತಿಗಾಗಿ ಗುತ್ತಿಗೆಗಳನ್ನು ಅಂತಿಮ ರೂಪಕ್ಕೆ ತರದಿದ್ದ ಕಾರಣ ₹ 13.55 ಕೋಟಿ ಮೌಲ್ಯದ 22 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ತಟಸ್ಥಗೊಂಡಿದ್ದ ದಿನಾಂಕದಿಂದ ಒಂದರಿಂದ ಆರು ವರ್ಷಗಳಿಗೂ ಮೀರಿದ ಸಾಲುಗಳಿಗೆ ನಿಷ್ಪ್ರಯೋಜಕವಾಗಿ ಉಳಿದಿದ್ದವು.

- ₹ 28 ಕೋಟಿ ಮೌಲ್ಯದ 33 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಗುತ್ತಿಗೆ ಷರತ್ತುಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದ ದಿನಾಂಕಗಳನ್ನು ಮೀರಿದಂತೆ 4 ರಿಂದ 63 ತಿಂಗಳುಗಳವರೆಗೆ ದುರಸ್ತಿ ಮಾಡುವವರಲ್ಲಿ ಉಳಿದುಕೊಂಡಿದ್ದವು, ಹೀಗಿದ್ದೂ ಕೂಡ ವಲಯಗಳು ಗುತ್ತಿಗೆಯನ್ನು ರದ್ದುಗೊಳಿಸಿ ಹಾಗೂ ತಪ್ಪಿತಸ್ಥ ದುರಸ್ತಿ ಮಾಡುವವರಿಂದ ₹ 1.26 ಕೋಟಿ ಮೌಲ್ಯದಷ್ಟು ಸಮಾಪನ ನಷ್ಟಗಳನ್ನು ವಿಧಿಸಲು ಮತ್ತು ವಸೂಲಾತಿ ಮಾಡಲು ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ.

- ಕೆಟ್ಟು ಸ್ಥಗಿತಗೊಂಡಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ದುರಸ್ತಿ ಮಾಡಿಸದ ತತ್ಪರಿಣಾಮವಾಗಿ, ಈ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು (55 ಸಂಖ್ಯೆಗಳು) ವಿದ್ಯುತ್ ಪ್ರಸರಣಾ ವ್ಯವಸ್ಥೆಯೊಳಕ್ಕೆ ಹಿಂತರಲು ಸಾಧ್ಯವಾಗಿರಲಿಲ್ಲ ಹಾಗೂ ಅಲ್ಲದೆಯೇ ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಖರೀದಿಯ ಮೇಲೆ ₹ 75.90 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚವನ್ನು ಭರಿಸುವಲ್ಲಿ ಪರಿಣಮಿಸಿತು.

ವಿದ್ಯುತ್ ಟ್ರಾನ್ಸ್‌ಫಾರ್ಮರುಗಳ ದುರಸ್ತಿಗಳಿಗೆ ಸಂಬಂಧಿಸಿದಂತೆ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಹಾಗೂ ಗುತ್ತಿಗೆ ಷರತ್ತುಗಳ ಅನುಸಾರ ದುರಸ್ತಿ ಮಾಡಲಾಗಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಹಿಂಪಡೆಯುವಂತೆ ಹಾಗೂ ಕಾರ್ಯೋದ್ಯುಕ್ತಗೊಳಿಸಲಾಗಿರುವ ಎಲ್ಲಾ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಸಮಾಪನ ನಷ್ಟಗಳನ್ನು ದುರಸ್ತಿ ಮಾಡುವವರಿಂದ ವಸೂಲಾತಿ ಮಾಡುವಂತೆ ವಿದ್ಯುತ್ ಪ್ರಸರಣ ವಲಯಗಳ ಎಲ್ಲಾ ಮುಖ್ಯ ಇಂಜಿನಿಯರುಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಜುಲೈ 2020). ದುರಸ್ತಿಯ ಅಡಿಯಲ್ಲಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯು ಪೂರ್ಣಗೊಂಡನಂತರ ದಂಡವನ್ನು ವಿಧಿಸಲಾಗುವುದು ಎಂಬುದಾಗಿಯೂ ತಿಳಿಸಿತು.

**ಶಿಫಾರಸುಗಳು**

ಕಂಪನಿಯು ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳಬಹುದು:

- **ಕೆಟ್ಟು ಸ್ಥಗಿತಗೊಂಡಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪ್ರಾಥಮಿಕ ಪರೀಕ್ಷಣೆ ಮತ್ತು ಅಂದಾಜುಗಳನ್ನು ಅಂತಿಮಗೊಳಿಸುವಿಕೆಯಲ್ಲಿ ಆರ್‌ಟಿ ವಿಭಾಗಗಳಿಂದ ನಿರ್ದಿಷ್ಟಗೊಳಿಸಲಾಗಿದ್ದ ಕಾಲಮಿತಿಗೆ ಬದ್ಧತೆ;**

- **ಟ್ರಾನ್ಸ್‌ಫಾರ್ಮರ್ ದುರಸ್ತಿ ಸಮಿತಿಯಿಂದ ಸಮಯೋಚಿತ ನಿರ್ಧಾರಗಳು ಮತ್ತು ವಲಯಗಳಿಂದ ಟೆಂಡರ್‌ಗಳ ಅಂತಿಮಗೊಳಿಸುವಿಕೆ;**

- **ತಪ್ಪಿತಸ್ಥ ದುರಸ್ತಿದಾರರ ವಿರುದ್ಧ ಗುತ್ತಿಗೆ ಕರಾರುಗಳ ದಂಡನಾತ್ಮಕ ಅನುವುಗಳನ್ನು ಒತ್ತಾಕಯಪೂರ್ವಕವಾಗಿ ಜಾರಿಗೆ ತರುವಿಕೆ;**

- **ಕಂಪನಿಯ ಪ್ರಸಕ್ತ ಸೂಚನೆಗಳಂತೆ (ಜೂನ್ 2016) ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯ ಪ್ರಗತಿಯನ್ನು ಮಾಸಿಕವಾಗಿ ವಲಯದ ಮಟ್ಟದಲ್ಲಿ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ (ಯೋಜನೆ ಮತ್ತು ಮೇಲ್ವಿಚಾರಣೆ)ರವರ ಮಟ್ಟದಲ್ಲಿ ವಿಶ್ಲೇಷಣೆ.**